ಗರಿಷ್ಠ 33°c | ಕನಿಷ್ಠ 22°c



## ವೀರಶೈವ ಮಹಾಸಭಾಗೆ ಮಹದೇವ್ ನಾಮಪತ್ರ

**ಗುಂಡ್ಲುಪೇಟೆ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ಗ್ರಾಪಂ ಮಾಜಿ ಅಧ್ಯಕ್ಷ ಅರೇಪುರ ಮಹದೇವ ಕುಮಾರ್ ಬುಧವಾರ ನಾಮಪತ್ರ ಸಲ್ಲಿಸಿದರು. ಪಟ್ಟಣದ ಸೋಮೇಶ್ವರ ವಿದ್ಯಾರ್ಥಿ ನಿಲಯದ ಅಖಿಲ ಭಾರತ ವೀರಶೈವ ಮಹಾಸಭಾದ ಕಚೇರಿಯಲ್ಲಿ ಚುನಾವಣಾಧಿಕಾರಿ ಅಂಕಪ್ಪ ಅವರಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ನಿರ್ದೇಶಕರಾದ ದೊಡ್ಡಹುಂಡಿ ಸತೀಶ್, ಮರಳಾಪುರ ನಂದೀಶ್ ಜೊತೆಗೂಡಿ ನಾಮಪತ್ರ ಸಲ್ಲಿಸಿದರು. ಅರೇಪುರ ಮಹದೇವ ಕುಮಾರ್ ಅವರು ತಾಲೂಕಿನ ಚಿಕ್ಕಾಟಿ ಗ್ರಾಪಂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ ಹಾಗೂ ಬಿಜೆಪಿ ಸಕ್ರಿಯ ಕಾರ್ಯಕರ್ತರಾಗಿದ್ದಾರೆ.

## ಸುದ್ದಿ ಸಿಂಚನ

### ಮೈಸೂರು, ಚಾ.ನಗರ ಗೋಷ್ಠಿಗೆ ಉದ್ದಾನ ಶ್ರೀ



**ಗುಂಡ್ಲುಪೇಟೆ:** ಚಾಮರಾಜನಗರ ಮತ್ತು ಮೈಸೂರು ಜಿಲ್ಲಾ ಮಠಾಧಿಪತಿಗಳ ಗೋಷ್ಠಿಗೆ ಪ್ರಧಾನ ಕಾರ್ಯದರ್ಶಿಯಾಗಿ ಗುಂಡ್ಲುಪೇಟೆ ತಾಲೂಕಿನ ಮೂಡುಗೂರು ವಿರಕ್ತ ಮಠಾಧೀಶ ಇಮ್ಮಡಿ ಉದ್ದಾನ ಸ್ವಾಮೀಜಿ ಆಯ್ಕೆಯಾಗಿದ್ದಾರೆ.

### 5-8ನೇ ತರಗತಿ ಪ್ರವೇಶಕ್ಕೆ ಅರ್ಜಿಗಳಿಗೆ ಆಹ್ವಾನ

**ಗುಂಡ್ಲುಪೇಟೆ:** ತಾಲೂಕಿನ ಪಡಗೂರು ಅಡವಿ ಮಠ ಹಾಗೂ ಶ್ರೀ ಮದ್ದಾನೇಶ್ವರ ವಿದ್ಯಾಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಮಹಾಮನೆ (ಶ್ರೀ ಮದ್ದಾನೇಶ್ವರ ಉಚಿತ ಶಿಕ್ಷಣ ಯೋಜನೆ)ಗೆ 2026-27ನೇ ಸಾಲಿನ 5-8ನೇ ತರಗತಿಗೆ ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಹಾಮನೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳನ್ನು ನೀಡಲಾಗುತ್ತದೆ. ಆಸಕ್ತರು ಅರ್ಜಿಗಳನ್ನು ಮೇ 16ರೊಳಗೆ ಕಚೇರಿಗೆ ತಲುಪಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮದ್ದಾನೇಶ್ವರ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಅಥವಾ ಮಹಾಮನೆ ನಿಲಯ ಪಾಲಕರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಎಂ.ಸಿ. ಸ್ವಾಮಿ ತಿಳಿಸಿದ್ದು, ಹೆಚ್ಚಿನ ಮಾಹಿತಿಗೆ 08229222513 ಹಾಗೂ 7337722109 ಸಂಖ್ಯೆಗೆ ಸಂಪರ್ಕಿಸುವಂತೆ ಕೋರಿದ್ದಾರೆ.

### ನಾಳೆ ಕೆಡಿಪಿ ಸಭೆ

**ಚಾಮರಾಜನಗರ:** ಜಿಲ್ಲಾಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ಮೇ 8ರಂದು ಬೆಳಿಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ನೂತನ ಜಿಲ್ಲಾ ಪಂಚಾಯ್ತಿ ಕೆಡಿಪಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯ್ತಿ ಸಿಇಒ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪಾಲಿಟೆಕ್ನಿಕ್ ಕಾಲೇಜಿನ ವಿವಿಧ ಕೋರ್ಸ್‌ಗೆ ಅರ್ಜಿ

**ಚಾಮರಾಜನಗರ:** ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಬರುವ ನಗರದ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ 2026-27ನೇ ಸಾಲಿಗೆ ಮೆರಿಟ್ ಆಧರಿತ ಪ್ರವೇಶಾತಿ ಪ್ರಾರಂಭಗೊಂಡಿದ್ದು, ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರಥಮ ಡಿಪ್ಲೋಮಾದಲ್ಲಿ ವ್ಯಾಸಂಗ ಮಾಡಲು ಇಚ್ಛಿಸುವ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (ಸಿಎಸ್), ವಿದ್ಯುನ್ಮಾನ ಮತ್ತು ದೂರಸಂಪರ್ಕ ಎಂಜಿನಿಯರಿಂಗ್ (ಇಸಿ), ಮೆಕ್ಯಾನಿಕಲ್ ಎಂಜಿನಿಯರಿಂಗ್ (ಎಂಇ), ಸಿವಿಲ್ ಎಂಜಿನಿಯರಿಂಗ್ (ಸಿಇ), ಮೆಷಿನ್ ಟೂಲ್ ಟೆಕ್ನಾಲಜಿ (ಎಂಟಿಟಿ) ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಮೇ 16ರ ಸಂಜೆ 5.30ರೊಳಗೆ ಖುದ್ದಾಗಿ ಕಾಲೇಜಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಕಚೇರಿ ಹಾಗೂ ಪ್ರಾಂಶುಪಾಲರಾದ ಎಚ್.ಜಿ. ಲೋಕೇಶ್‌ರನ್ನು (9880451356) ಸಂಪರ್ಕಿಸಬಹುದಾಗಿದೆ.

### ನಟೇಶ್ ಬಾಬು ನಿಧನ



**ಕೊಳ್ಳೇಗಾಲ:** ಪಟ್ಟಣದ ದೇವಾಂಗ ಪೇಟೆಯ ಚೌಡೇಶ್ವರಿ ಗುಡಿ ಬೀದಿ ವಾಸಿ ನಿವೃತ್ತ ದೈಹಿಕ ಶಿಕ್ಷಕ ನಟೇಶ್ ಬಾಬು (61) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ಅನಾರೋಗ್ಯದಿಂದ ಸಾವನ್ನಪ್ಪಿದ್ದಾರೆ. ಇವರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದು, ಪಟ್ಟಣದ ದೇವಾಂಗ ಜನಾಂಗದ ರುದ್ರಭೂಮಿಯಲ್ಲಿ ಬುಧವಾರ ಅಂತ್ಯಕ್ರಿಯೆ ಜರುಗಿತು.



## ಒಂಟಿ ಸಲಗ ದಾಳಿಗೆ ತೆಂಗು ಮಾವು ಹಾನಿ: ರೈತ ಕಣ್ಣೀರು

**ಗುಂಡ್ಲುಪೇಟೆ:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ವಲಯದಲ್ಲಿ ಒಂಟಿಯಾನೆ ಕಾಟ ಮುಂದುವರೆದಿದೆ. ತಾಲೂಕಿನ ಆಲತ್ತೂರು ಗ್ರಾಮದಲ್ಲಿ ಒಂಟಿಯಾನೆ ದಾಳಿ ಮಾಡಿ ತೆಂಗಿನ ಸಸಿ, ಮಾವಿನ ಮರವನ್ನು ನಾಶಗೆಡವಿದೆ. ರೈತ ಟಿ.ಶಾಂತೇಶ್ ಎಂಬುವರಿಗೆ ಸೇರಿದ 5 ತೆಂಗಿನ ಸಸಿ ಬುಡ ಸಮೇತ ಮುರಿದು ಹಾಕಿದ್ದು, ಅಲ್ಲದೇ 5 ಮಾವಿನ ಮರದ ರೆಂಬೆ ಮುರಿದು ಹಣ್ಣುಗಳುಂ ಸ್ವಾಹ ಎಂದಿದೆ. ಇವರೊಂದಿಗೆ ಹನುಮಪ್ಪ ಹಾಗೂ ನಾಗೇಗೌಡ ಎಂಬುವರಿಗೆ ಸೇರಿದ ತಲಾ 5 ಮಾವಿನ ಮರಗಳನ್ನು ಮುರಿದು ಹಾಕಿದೆ. ರೈತರ ಜಮೀನಿಗೆ ಹಾಕಿದ್ದ ಸೋಲಾರ್ ತಂತಿ ಬೇಲಿಯನ್ನು ಅಲ್ಲಲ್ಲಿ ತುಳಿದು, ಕಲ್ಲಿನ ಕಂಬಗಳನ್ನು ಮುರಿದಿದೆ ಎಂದು ರೈತ ಟಿ. ಶಾಂತೇಶ್ ಕನ್ನಡಪ್ರಭಕ್ಕೆ ತಿಳಿಸಿದ್ದಾರೆ.

**ಒಂಟಿಯಾನೆ ಕಾಟ:** ಓಂಕಾರ ವಲಯದ ಕುರುಬರಹುಂಡಿ, ಮಂಚಹಳ್ಳಿ ಸುತ್ತಮುತ್ತಲು ಪ್ರತಿದಿನ ಕಾಡಾನೆ ಕಾಟ ತಪ್ಪಿದ್ದಲ್ಲ. ಇದೀಗ ಆಲತ್ತೂರು ಕಡೆಗೆ ಕಾಲಿಟ್ಟಿದೆ.



ತೆಂಗಿನ ಸಸಿಯೊಂದಿಗೆ ರೈತ ಶಾಂತೇಶ್

## ಅಲ್ಪಸಂಖ್ಯಾತ ಕಾಲೇಜಿಗೆ ಬಾಡಿಗೆ ಕಟ್ಟಡಕ್ಕಾಗಿ ಮಾಲೀಕರಿಗೆ ಆಹ್ವಾನ

**ಚಾಮರಾಜನಗರ:** ಪಟ್ಟಣದಲ್ಲಿ 2026-27ನೇ ಸಾಲಿನ ಶೈಕ್ಷಣಿಕ ಸಾಲಿನಿಂದ ನೂತನವಾಗಿ ಅಲ್ಪ ಸಂಖ್ಯಾತರ ಮಹಿಳಾ ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜನ್ನು ಪ್ರಾರಂಭ ಮಾಡುತ್ತಿದ್ದು, ಕಾಲೇಜನ್ನು ಪ್ರಾರಂಭ ಮಾಡಲು ಬಾಡಿಗೆಕಟ್ಟಡ ಬೇಕಾಗಿದ್ದು, ಆಸಕ್ತಿಯಿರುವ ಕಟ್ಟಡ ಮಾಲೀಕರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸಬಹುದು.

ಬಾಡಿಗೆ ಕಟ್ಟಡವು ಮೂಲಭೂತ ಸೌಕರ್ಯಗಳಾದ 24X7 ನೀರು, ವಿದ್ಯುತ್ ಸರಬರಾಜು ವ್ಯವಸ್ಥೆ, ಸೋಲಾರ್ ವ್ಯವಸ್ಥೆ ಗ್ರಂಥಾಲಯ, ಕಂಪ್ಯೂಟರ್ ಸೌಲಭ್ಯ ಹಾಗೂ ಸೂಕ್ತವಾದ ಗಾಳಿ, ಬೆಳಕು ಇರುವ ಹಾಗೆ 16 ಕೊಠಡಿಗಳ ಸ್ಥಳಾವಕಾಶ ಕಲ್ಪಿಸಬೇಕು. ಕಟ್ಟಡವು ವ್ಯವಸ್ಥಿತವಾದ ಒಳಚರಂಡಿ ವ್ಯವಸ್ಥೆಯನ್ನು ಹೊಂದಿರಬೇಕು.

ಕಟ್ಟಡಕ್ಕೆ ಸೇಫ್ಟಿ ಅರ್ಥಿಂಗ್ ಇರಬೇಕು, ಕಟ್ಟಡವು ವಿದ್ಯುತ್ ತಂತಿಗಳಿಂದ ಸೂಕ್ತ ಅಂತರ ಹಾಗೂ ಸುರಕ್ಷತೆಯಿಂದ ಕೂಡಿದ್ದು, ನಿಷೇಧಿತ ಹಾಗೂ ವ್ಯಸನ ಪದಾರ್ಥಗಳಿಂದ ಮುಕ್ತವಾದ ಸ್ಥಳದಲ್ಲಿರಬೇಕು. ಕಟ್ಟಡವು ಬಸ್ ನಿಲ್ದಾಣಕ್ಕೆ ಹತ್ತಿರದಲ್ಲಿರಬೇಕು ಹಾಗೂ ಕಟ್ಟಡದ ಮಾಲೀಕರು ಟೈಟಲ್ ಡೀಡ್ ಹೊಂದಿರಬೇಕು.

ಆಸಕ್ತ ಕಟ್ಟಡ ಮಾಲೀಕರು ವಿವರಗಳಿಗೆ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಲ್ಟಿ ಪರ್ಪಸ್ ಹಾಲ್, ಜಿಲ್ಲಾಡಳಿತ ಭವನದ ಆವರಣ, ಚಾಮರಾಜನಗರ (ಮೊ.ಸಂ 9844560011) ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಪುಸ್ತಕ ಓದಿನಿಂದ ಜೀವನ ಮೌಲ್ಯ ವೃದ್ಧಿ: ಸುತ್ತೂರು ಶ್ರೀ

### ಡಾ. ಮಮತಾ ಅವರ 'ಲಕ್ಷ್ಯ' ಕವನ ಸಂಕಲನ ಬಿಡುಗಡೆ ವೇಳೆ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಸಲಹೆ | ಡಾ. ಮಮತಾ ಕಾರ್ಯ ಶ್ಲಾಘನೆ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಪುಸ್ತಕಗಳನ್ನು ಹೆಚ್ಚೆಚ್ಚು ಓದುವುದರಿಂದ ಜ್ಞಾನ ಹೆಚ್ಚುವುದರ ಜೊತೆಗೆ ಜೀವನ ಮೌಲ್ಯ ವೃದ್ಧಿಯಾಗುತ್ತದೆ. ಬರೆಯುವ ಕಲೆಯನ್ನು ಕಲಿಸುತ್ತದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಹೇಳಿದರು.

ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನಿಂದ ನಡೆದ ಡಾ. ಮಮತಾ ಲೋಕೇಶ್ವರಿ ಎನ್. ಅವರ 'ಲಕ್ಷ್ಯ' ಕವನ ಸಂಕಲನ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಡಾ. ಮಮತಾ ಅವರ ಕವನ ಸಂಕಲನ ಸಾಮಾಜಿಕ ಚಿಂತನೆಗಳನ್ನು ಒಳಗೊಂಡಿದ್ದು, ಒಂದು ಉತ್ತಮ ಸಮಾಜಕ್ಕೆ ಅಗತ್ಯತೆಯುಳ್ಳದ್ದಾಗಿದೆ ಎಂದರು.

ವ್ಯದ್ಯಕೀಯ ವೃತ್ತಿ ಬೇರೆ, ಸಾಹಿತ್ಯ ಕ್ಷೇತ್ರನೇ ಬೇರೆ ಒಬ್ಬ ಹೆಣ್ಣು ದಿನನಿತ್ಯ ವಸ್ತುಗಳು, ಪರಿಸರ ಸುತ್ತಮುತ್ತ ಇರುವ ವಾತಾವರಣವನ್ನು ಕವನ ಸಂಕಲನದಲ್ಲಿ ಕಟ್ಟಿಕೊಡುವ ಮೂಲಕ ಲಕ್ಷ್ಯ ಕವನ ಸಂಕಲನ ಬರೆದು ಚೊಚ್ಚಲ ಯಶಸ್ವಿಯಾಗಿದ್ದಾಳೆ.




ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ನಿಂದ ನಡೆದ ಲಕ್ಷ್ಯ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಭಾಗವಹಿಸಿದ್ದರು.

ಕವನ ಸಂಕಲನದಲ್ಲಿ ಸಾಧನೆ ಮಾಡಿ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುತ್ತಿರುವುದು ತುಂಬಾ ಸಂತಸಕರ ವಿಷಯವಾಗಿದೆ ಎಂದು ಮೆಚ್ಚಿಗೆ ವ್ಯಕ್ತಪಡಿಸಿ ಶುಭ ಕೋರಿದರು.

ಕಾರ್ಯಕ್ರಮ ಉದ್ಘಾಟಿಸಿದ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸೋಮಶೇಖರ ಮಾತನಾಡಿ, 12 ಶತಮಾನದಲ್ಲಿ ಅಕ್ಕಮಹಾದೇವಿ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಮಹಿಳಾ ಸಾಹಿತಿಗಳು ನಾಡನ್ನು ಸುಂದರಗೊಳಿಸಿದ್ದಾರೆ. ಡಾ. ಮಮತಾ ಅವರು ವೈದ್ಯಳಾಗಿ 'ಲಕ್ಷ್ಯ' ಕವನ ಸಂಕಲನ ಬರೆದಿರುವ ಚೆನ್ನಾಗಿ ಮೂಡಿ ಬಂದಿದೆ. ಅವರಿಗೆ ಮುಂದೆ ಉತ್ತಮ ಭವಿಷ್ಯ ಇದೆ ಎಂದರು.

ಕಾವ್ಯಗಳನ್ನು ರಚನೆ ಮಾಡಬೇಕಾದರೆ ಮೊದಲಿಗೆ ಭಾವನೆಗಳು, ಅಂತರಂಗದ ಅನುಭವ ಮುಖ್ಯವಾಗಿರಬೇಕು. ಜತೆಗೆ ತಾವು ಕಂಡಂಥ ಸತ್ಯ ಮತ್ತು ಅನ್ವೇಷಣೆಯ ಮೂಲಕ ಕಾವ್ಯಗಳನ್ನು ರಚಿಸಬೇಕು. ಮಾನವೀಯ ಮೌಲ್ಯಗಳನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಕಲ್ಪನಾ ಶಕ್ತಿ, ಕಲ್ಪನಾಲೋಕ ಹಾಗೂ ಕನಸುಗಳಿರಬೇಕು. ಕನಸುಗಾರನಾಗದವನು ಯಾವುದೇ ಸಾಧನೆಯನ್ನು ಮಾಡಲಾಗದು. ಉದಾರವಾಡಿ, ಸಮಾಜವಾದಿಯಾಗಿರಬೇಕು. ಏಕಾಗ್ರತೆ ಬಹಳ ಮುಖ್ಯ. ಕವಿ ಹಾಗೂ ಕವಯತ್ರಿಯಾಗಬೇಕಾದರೆ ಅವರು ಲೋಕಾಂತರಗಳಾಗಿರಬೇಕು. ಸಮಾಜದ ನೋವಿಗೆ ಸ್ಪಂದಿಸಬೇಕು. ಪ್ರಕೃತಿಯ ಜತೆಗೆ ಉತ್ತಮವಾದ ಸಂಬಂಧವನ್ನು ಇಟ್ಟುಕೊಳ್ಳಬೇಕು. ಅಷ್ಟೇ ಅಲ್ಲದೇ ಓದುವ ಆಸಕ್ತಿ ಮತ್ತು ಅಭಿರುಚಿ ಇರಬೇಕು ಎಂದರು.

ಮೈಸೂರಿನ ಹಿರಿಯ ಸಾಹಿತಿ ಪ್ರೊ.ಶಿವರಾಜಪ್ಪ ಮಾತನಾಡಿ, ಡಾ.ಮಮತಾ ಅವರು ಅಂತರಂಗದ ಅನುಭವ ಹೊಂದಿ ನೈಜ ಕವನ ಸಂಕಲನ ಬರೆದಿದ್ದಾರೆ. ಕಿರಿಯ ವಯಸ್ಸಿನ ಹಿರಿಯರು ಬರೆಯುವ ಮಾದರಿಯಲ್ಲಿ ಕವನ ಸಂಕಲನ ಬರೆದಿದ್ದಾರೆ. ಅವರ ಪ್ರಬುದ್ಧತೆ ಇದೆ. ಅವರಿಗೆ ಎಲ್ಲ ಸಹಕಾರ ಅಗತ್ಯ. ಅಂಥ ಯುವ ಸಾಹಿತ್ಯ ಬೆಳೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಮಾಜಿ ಸಚಿವೆ ಗೀತಾ ಮಹದೇವ ಪ್ರಸಾದ್ ಮಾತನಾಡಿದರು. ಲೇಖಕಿ ಡಾ.ಮಮತಾ ಮಾತನಾಡಿ, ತಾಯಿಯ ಪ್ರೇರಣೆ ಹಾಗೂ ಹೆಚ್ಚಿನ ಪುಸ್ತಕಗಳ ಓದುವ ಮೂಲಕ ನಾನೇ ಏಕೆ ಪುಸ್ತಕ ಬರೆಯುವ ಆಸೆ ಮೂಡಿತು. ಅದರಂತೆ 'ಲಕ್ಷ್ಯ' ಕವನ ಸಂಕಲನ ಬರೆದಿದ್ದೇನೆ ಎಂದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಕೆ. ರವಿ ಕುಮಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕದಳಿ ವೇದಿಕೆ ಜಿಲ್ಲಾಧ್ಯಕ್ಷೆ ವಸಂತಮ್ಮ ಉಪಸ್ಥಿತರಿದ್ದರು.

## ಪುತ್ತನಪುರ, ಕುಂದಕೆರೆ ಡೈರಿಗೆ ತಲಾ 3 ಲಕ್ಷ ರು. ಚೆಕ್ ವಿತರಣೆ



ಕುಂದಕೆರೆ, ಪುತ್ತನಪುರ ಡೇರಿ ಅಧ್ಯಕ್ಷರಿಗೆ ಚಾಮುಲ್ ನಿರ್ದೇಶಕರಾದ ಎಚ್.ಎಸ್. ನಂಜುಂಡ ಪ್ರಸಾದ್, ಎಂ.ಪಿ. ಸುನೀಲ್ ಚೆಕ್ ವಿತರಿಸಿದರು.

• **ಕನ್ನಡಪ್ರಭ ವಾರ್ತೆ** ಗುಂಡ್ಲುಪೇಟೆ

ತಾಲೂಕಿನ ಪುತ್ತನಪುರ ಹಾಗೂ ಕುಂದಕೆರೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ (ಚಾಮುಲ್) ನೀಡುವ ಕಟ್ಟಡ ಅನುದಾನ ತಲಾ 3 ಲಕ್ಷ ರು.ಗಳ ಚೆಕ್‌ಗಳನ್ನು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರೂ ಆದ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡ ಪ್ರಸಾದ್, ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ವಿತರಿಸಿದರು.

ಪಟ್ಟಣದಲ್ಲಿ ಪುತ್ತನಪುರ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷ ಸುರೇಶ್ ಪಿ.ಎಸ್, ಸಂಘದ ಮುಖ್ಯ ಕಾರ್ಯ ನಿರ್ವಾಹಕ ಮಹದೇವ ಪ್ರಸಾದ್ ಮತ್ತು ಕುಂದಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬಂಗಾರಪ್ಪ, ಮುಖ್ಯ ಕಾರ್ಯ ನಿರ್ವಾಹಕ ಪುನೀತ್ ಕುಮಾರ್‌ಗೆ ತಲಾ 3 ಲಕ್ಷ ರು.ಚೆಕ್ ಹಸ್ತಾಂತರಿಸಿದರು.

ನಿರ್ದೇಶಕ ಎಚ್.ಎಸ್. ನಂಜುಂಡ ಪ್ರಸಾದ್ ಮಾತನಾಡಿ, ಹಾಲು ಉತ್ಪಾದಕರಸಹಕಾರಸಂಘಗಳುಮೂಲಭೂತ ಸೌಲಭ್ಯಗಳೊಂದಿಗೆ ಸುಸಜ್ಜಿತ ಕಟ್ಟಡ ಹಾಗೂ ಹಾಲು ಶೇಖರಣ ಘಟಕ ನಿರ್ಮಿಸಿ, ಗುಣಮಟ್ಟದ ಹಾಲು ಶೇಖರಿಸಿ ಎಂದು ಸಲಹೆ ನೀಡಿದರು.

ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ಮಾತನಾಡಿ, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿರುವ ನಿಧಿಗಳ ಜೊತೆಗೆ ಚಾಮುಲ್ ನೀಡುವ ಸಹಾಯಧನ ಪಡೆದು ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಅನುದಾನ ನೀಡುತ್ತಿದೆ. ಅನುದಾನ ಸದ್ಬಳಕೆ ಮಾಡಿಕೊಳ್ಳಿ ಎಂದರು.

ಈ ಸಮಯದಲ್ಲಿ ಚಾಮುಲ್ ಗುಂಡ್ಲುಪೇಟೆ ಉಪ ವಿಭಾಗದ ವಿಸ್ತರಾಧಿಕಾರಿಗಳಾದ ಪ್ರಕಾಶ್ ಎಚ್, ಉದಯ್, ಮಂಜೇಶ್ ಹಾಜರಿದ್ದರು.

## ಇಂದು ಯುವ ಕಾಂಗ್ರೆಸ್ ಪ್ರತಿಭಟನೆ

**ಗುಂಡ್ಲುಪೇಟೆ:** ವಾಣಿಜ್ಯ ಹಾಗೂ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮತ್ತು ಕೊರತೆ ಖಂಡಿಸಿ ಬೇಗೂರು ಹಾಗೂ ಗುಂಡ್ಲುಪೇಟೆ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಮೇ 7ರಂದು ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಿದೆ. ಪಟ್ಟಣದ ಕಾಂಗ್ರೆಸ್ ಕಚೇರಿಯಿಂದ ಬೆಳಗ್ಗೆ 10.30ಕ್ಕೆ ಪ್ರತಿಭಟನೆ ಆರಂಭಗೊಳ್ಳಲಿದ್ದು, ಈ ಪ್ರತಿಭಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಬೇಕು ಎಂದು ಬೇಗೂರು, ಗುಂಡ್ಲುಪೇಟೆ ಯುವ ಕಾಂಗ್ರೆಸ್ ಸಮಿತಿ ಮನವಿ ಮಾಡಿದೆ.

## ಪುರಾಣ ಪ್ರಸಿದ್ಧ ಮಧ್ಯರಂಗ ದೇಗುಲ ಉದ್ಘಾಟನೆಗೆ ಸಿದ್ಧ: ಕಾವೇರಿ ದ್ವೀಪದ ಗುಡಿ ಕಾಮಗಾರಿಗೆ ಅಂತಿಮ ಸ್ವರೂಪ

### ಶಾಸಕ ಎಂ.ಆರ್. ಮಂಜುನಾಥ್‌ರಿಂದ ಸ್ಥಳ ಪರಿಶೀಲನೆ | ಉದ್ಘಾಟನೆಗೆ ತಯಾರಾಗುವಂತೆ ಸೂಚನೆ

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ

ಕರ್ನಾಟಕ ಸೇರಿದಂತೆ ದಕ್ಷಿಣ ಭಾರತ ಮತ್ತು ಪುರಾಣ ಪ್ರಸಿದ್ಧ ತ್ರಿರಂಗ ಯಾತ್ರಾ ಸ್ಥಳಗಳಲ್ಲಿ ಒಂದಾಗಿರುವ ಮಧ್ಯರಂಗದ ದೇಗುಲವು ಉದ್ಘಾಟನೆಗೆ ಸಿದ್ಧಗೊಳ್ಳುತ್ತಿದ್ದು, ಹನೂರು ಶಾಸಕ ಎಂ.ಆರ್. ಮಂಜುನಾಥ್ ಅವರು ಕಾಮಗಾರಿಯನ್ನು ಪರಿಶೀಲಿಸಿದರು. ಲೋಕಾರ್ಪಣೆಗೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರಾಚ್ಯವಸ್ತು ಇಲಾಖೆ ಹಾಗೂ ದಾನಿಗಳ ನೆರವಿನಿಂದ ಸುಮಾರು 5.38 ಕೋಟಿ ರು.ಗೂ ಅಧಿಕ ವೆಚ್ಚದಲ್ಲಿ ಜೀರ್ಣೋದ್ಧಾರ ಹಾಗೂ ಪುನರ್ ನಿರ್ಮಾಣವಾಗಿರುವ ದೇವಾಲಯಗಳಲ್ಲಿ ಸಣ್ಣಪುಟ್ಟ ಕೆಲಸ ಬಿಟ್ಟರೆ, ಈ 2 ದೇವಾಲಯಗಳ ಕಾಮಗಾರಿ ಈಗಾಗಲೇ ಬಹುತೇಕ ಅಂತಿಮ ಹಂತದಲ್ಲಿದೆ. ಶೀಘ್ರ ಇನ್ನುಳಿದ ಕಾಮಗಾರಿಗಳನ್ನು ಮುಕ್ತಾಯಗೊಳಿಸುವಂತೆ ಸೂಚನೆ ನೀಡಿದರು.

ಈ ವೇಳೆ ಕೊಳ್ಳೇಗಾಲ ಉಪವಿಭಾಗಧಿಕಾರಿ ದಿನೇಶ್ ಕುಮಾರ್ ಮೀನಾ, ತಹಸೀಲ್ದಾರ್ ಬಸವರಾಜು, ಪಿಡಬ್ಲ್ಯುಡಿ ಎಇಇ ಪುರುಷೋತ್ತಮ್, ನಟರಾಜು, ಸುರೇಶ್, ಮಲ್ಲೇಶ್, ಪ್ರಭುಸ್ವಾಮಿ, ಶಾಂತರಾಜು, ನಾಗರಾಜು, ಜಮೀರ್, ಗುಲಾಬಿ, ಲಿಂಗರಾಜು, ರವಿ, ಮಂಟ್ಯಾ, ಗೋವಿಂದ, ಚನ್ನಲಿಂಗನಹಳ್ಳಿ ವೆಂಕಟೇಶ್ ಹಾಗೂ ಅಧಿಕಾರಿಗಳು ಮುಖಂಡರುಗಳು ಇದ್ದರು.



### ದೇಗುಲದ ಕಾಮಗಾರಿ ಪ್ರಗತಿ

ಪ್ರಾಚ್ಯವಸ್ತು ಇಲಾಖೆಯಿಂದ 2.58 ಕೋಟಿ ರು. ವೆಚ್ಚದಲ್ಲಿ ತಾಲೂಕಿನ ಶಿವನಸಮುದ್ರದ ಜಗನ್ಮೋಹನ ರಂಗನಾಥಸ್ವಾಮಿ ದೇವಾಲಯದ ಜೀರ್ಣೋದಾರ ಕಾಮಗಾರಿ ನಡೆಯುತ್ತಿದೆ. ದೇವಾಲಯದ ಸುತ್ತುಗೋಡೆ ದುರಸ್ತಿ, ಗರ್ಭಗುಡಿ ಚಪ್ಪರ ನಿರ್ಮಾಣ, ದರ್ಶನಕ್ಕೆ ನಿಲ್ಲುವ ಭಕ್ತರ ಸಾಲುಗಳ ನಿರ್ವಹಣೆಗೆ ಸ್ಟೇನ್ಲೆಸ್ ಸ್ಟೀಲ್ ಅಳವಡಿಕೆ, ದೇವಾಲಯದಲ್ಲಿ ಅಳವಡಿಸಲಾಗಿರುವ ಕಲ್ಲುಗಳ ಬಣ್ಣ ಮಾಸಿದ್ದರಿಂದ ಎಲ್ಲಾ ಕಲ್ಲುಗಳಿಗೂ ಸ್ಯಾಂಡ್ ಬ್ಲಾಸ್ಟ್ ಮಾಡಿಸುವ ಮೂಲಕ ಕಾಮಗಾರಿಗೆ ಆಧುನಿಕ ಸ್ಪರ್ಶ ನೀಡಲಾಗಿದೆ.

## ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

**ಚಾಮರಾಜನಗರ:** ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2025-26ನೇ ಸಾಲಿಗೆ ಇಲಾಖೆ ಮೂಲಕ ನೀಡಲಾಗುತ್ತಿರುವ ಶುಲ್ಕಮರುಪಾವತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಮೇ 16 ರವರೆಗೆ ವಿಸ್ತರಿಸಲಾಗಿದೆ. ಆನ್‌ಲೈನ್ ಮೂಲಕ ವೆಬ್‌ಸೈಟ್ www.ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮಗಳ ವಿವರ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ www.bcwd.karnataka.gov.in ಗೆ ಭೇಟಿ ನೀಡಬಹುದು. ಇಲಾಖಾ ಸಹಾಯವಾಣಿ 8050770004, ಇ-ಮೇಲ್ bcwdhelpline@gmail.com ಹಾಗೂ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇ-ಮೇಲ್ postmatrichelp@karnataka.gov.in ಸಂಪರ್ಕಿಸಬಹುದು.

## ಗಾಳಿ-ಮಳೆಗೆ ತುಂಡಾದ ವಿದ್ಯುತ್ ತಂತಿಯ ಸ್ಪರ್ಶದಿಂದ ಹಸು ಸಾವು

• **ಕನ್ನಡಪ್ರಭ ವಾರ್ತೆ** ಹನೂರು

ಬಾರಿ ಬಿರುಗಾಳಿ ಮಳೆಗೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಸ್ಪರ್ಶಿಸಿ ಹಸುವೊಂದು ಮೃತಪಟ್ಟಿರುವ ಘಟನೆಯು ಹನೂರು ತಾಲೂಕಿನ ನಾಗನತ್ತ ಗ್ರಾಮದಲ್ಲಿ ನಡೆದಿದೆ. ರೈತ ರಾಜಶೇಖರ್ ಎಂಬುವರು ಎಂದಿನಂತೆ ತಮ್ಮ ಹಸುಗಳನ್ನು ಮೇಯಲು ಜಮೀನಿನ ಪಕ್ಕದ ಖಾಲಿ ಜಾಗದಲ್ಲಿ ಬಿಟ್ಟಿದ್ದರು. ಈ ವೇಳೆ ಅಲ್ಲಿಯೇ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಹಸು ತುಳಿದಿದೆ. ಪರಿಣಾಮ ಹಸುವಿನ ದೇಹಕ್ಕೆ ವಿದ್ಯುತ್ ಪ್ರವಹಿಸಿ ಸ್ಥಳದಲ್ಲಿಯೇ ಮೃತಪಟ್ಟಿದೆ. ಈ ಸಂಬಂಧ ರೈತ ರಾಜಶೇಖರ್ ಅವರು ಅಧಿಕಾರಿಗಳು ಸೂಕ್ತ ಪರಿಹಾರ ವಿತರಿಸಬೇಕೆಂದು ಆಗ್ರಹಿಸಿದ್ದು, ಹನೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಹನೂರಲ್ಲಿ ಸೀಳು ನಾಯಿಗಳ ಹಿಂಡು ದಾಳಿಗೆ ಎಮ್ಮೆ ಬಲಿ



• **ಕನ್ನಡಪ್ರಭ ವಾರ್ತೆ** ಹನೂರು

ಸೀಳುನಾಯಿಗಳ ಹಿಂಡು ಎಮ್ಮೆಯ ಕಣ್ಣುಭಾಗವನ್ನು ಕಚ್ಚಿ, ಕೊಂದು ಹಾಕಿರುವ ಘಟನೆಯು ಹನೂರು ತಾಲೂಕಿನ ಪೊನ್ನಾಚಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ಯಾರಟ್ಟಿ ಗ್ರಾಮದಲ್ಲಿ ನಡೆದಿದೆ. ಹನೂರು ತಾಲೂಕಿನ ಗ್ಯಾರಟ್ಟಿ ಗ್ರಾಮದ ರೈತ ಪ್ರಕಾಶ್ ಎಂಬುವರು ತಮ್ಮ ಎಮ್ಮೆಯನ್ನು ಗ್ರಾಮದ ಈಶ್ವರಪ್ಪ ಎಂಬುವರ ಜಮೀನಿನಲ್ಲಿ ಮೇಯಲು ಬಿಟ್ಟಿದ್ದರು. ಈ ವೇಳೆ ಸೀಳುನಾಯಿಗಳು ದಾಳಿ ಮಾಡಿವೆ ಎನ್ನಲಾಗಿದೆ.

**ಅರಣ್ಯಾಧಿಕಾರಿಗಳ ದೌಡು:** ಘಟನೆ ಸಂಬಂಧ ಗೇರಟ್ಟಿ ಗ್ರಾಮಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಸೀಳುನಾಯಿಗಳ ಎಮ್ಮೆಯನ್ನು ಕೊಂದಿರುವ ಸಂಬಂಧ ಅರಣ್ಯಾಧಿಕಾರಿಗಳಿಗೆ ಪರಿಹಾರ ಒದಗಿಸಬೇಕೆಂದು ಪೊನ್ನಾಚಿಯ ಸ್ನೇಹರಾಜ್, ರೈತ ಪ್ರಕಾಶ್ ಆಗ್ರಹಿಸಿದ್ದಾರೆ.

**ವಿದ್ಯಾಸಾಧನೆ** | ಸಾಧಕ ವಿದ್ಯಾರ್ಥಿಗಳಿಗೆ ಪರಿಮಳ ನಾಗಪ್ಪ ಅಭಿನಂದನೆ

## ಜೆಎಸ್ಸೆಸ್ ಶಾಲೆ ಮಕ್ಕಳ ಸಾಧನೆಯು ಜಿಲ್ಲೆಗೆ ಕೀರ್ತಿ ತಂದಿದೆ: ಮಾಜಿ ಶಾಸಕಿ

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ

ಕಾಮಗೆರೆ ಜೆಎಸ್‌ಎಸ್ ಮಹದೇಶ್ವರ ಗ್ರಾಮೀಣ ಪ್ರೌಢಶಾಲೆ ಮಕ್ಕಳು 10ನೇ ತರಗತಿ ಪರೀಕ್ಷೆಯಲ್ಲಿ ಶೇ.100 ಸಾಧಿಸುವ ಮೂಲಕ ಗ್ರಾಮಕ್ಕೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ ಎಂದು ಮಾಜಿ ಶಾಸಕಿ ಪರಿಮಳ ನಾಗಪ್ಪ ಹೇಳಿದರು.

ಅವರು ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳಿಗೆ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು. ಗ್ರಾಮೀಣ ಮಕ್ಕಳು ಹೆಚ್ಚಿನ ಅಂಕಗಳಿಸಿ ಸಾಧನೆ ಮಾಡಿರುವುದು ಕಾಮಗೆರೆ ಶಾಲೆಗೆ ಮಾತ್ರವಲ್ಲ, ಇಡೀ ಜಿಲ್ಲೆಗೆ ಹೆಗ್ಗಳಿಕೆ ವಿಚಾರ. ಪರೀಕ್ಷೆಯಲ್ಲಿ ನೂರರಷ್ಟು ಸಾಧನೆ ಮಾಡಿರುವುದು ನನಗೆ ವೈಯಕ್ತಿಕ ಸಂತೋಷವಾಗಿದೆ.

ಪರೀಕ್ಷೆಯಲ್ಲಿ ಹೆಚ್ಚು ಸಾಧನೆ ಮಾಡಲು ಶಿಕ್ಷಕರ ಸಹಕಾರ ಪ್ರಮುಖವಾದದ್ದು, ಶಿಕ್ಷಕರು ಹೆಚ್ಚಿನ ಫಲಿತಾಂಶಕ್ಕಾಗಿ ಶ್ರಮಿಸಿದ್ದಾರೆ ಅವರು ವಿಶೇಷ ತರಗತಿ ಸೇರಿದಂತೆ ವಿಷಯವಾರು ನುರಿತ ಶಿಕ್ಷಕರಿಂದ ಪಾಠ ಪ್ರವಚನದಿಂದಾಗಿ ಹೆಚ್ಚು ಸಾಧನೆ ಮಾಡುವಂತಾಗಿದೆ ಎಂದು ಪ್ರಶಂಸಿಸಿದರು. ಕಾಮಗೆರೆ ಶ್ರೀಮಹದೇಶ್ವರ ಜೆಎಸ್‌ಎಸ್ ಮಕ್ಕಳ ಪೈಕಿ ತನುಶ್ರೀ 585 ಅಂಕಗಳಿಸಿ ಸಾಧನೆಗೈದಿದ್ದಾರೆ. ಉಳಿದಂತೆ ಭೂಮಿಕಾ, ಮಾನಸ, ಮನು, ಸುಜಾತಾ ಸೇರಿದಂತೆ ಹಲವು ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆಯಲ್ಲಿತೇರ್ಗಡೆಯಾಗಿದ್ದಾರೆ. ಈ ವೇಳೆ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಸಂಯೋಜಕ ಡಾ. ಉಮಾಶಂಕರ್, ಗ್ರಾಪಂನ ಸದಸ್ಯ ಕುಮಾರ್ ಯುವ ಮುಖಂಡ ಆನಂದ್, ಉಮೇಶ್, ಮಮತಾ ರಾಜಶೇಖರ್ ಇನ್ನಿತರರಿದ್ದರು.



**ವಚನಸುಧಾ** | ಇಮ್ಮಡಿ ಗುರುಲಿಂಗ ಸ್ವಾಮೀಜಿಗಳ ನೇತೃತ್ವದಲ್ಲಿ ಕಾರ್ಯಕ್ರಮ

## ಗುರುರಾಮಲಿಂಗೇಶ್ವರ ಮಠದಲ್ಲಿ ವಚನ ಗಾಯನ ಯಶಸ್ವಿ ಸಮಾಪ್ತಿ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಕೆಸ್ತೂರಿನ ಬಸವೇಶ್ವರ ಸಾಂಸ್ಕೃತಿಕ ಕಲಾ ಸಂಘದಿಂದ ಬಸವ ಜಯಂತಿ ಅಂಗವಾಗಿ ಕೊಳ್ಳೇಗಾಲ ತಾಲೂಕಿನ ಚಿಲಕವಾಡಿ ಬೆಟ್ಟದಲ್ಲಿರುವ ಗುರುರಾಮ ಲಿಂಗೇಶ್ವರ ಮಠದಲ್ಲಿ ವಚನ ಗಾಯನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಮಠದ ಅಧ್ಯಕ್ಷ ಇಮ್ಮಡಿ ಗುರುಲಿಂಗ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶ್ರೀಗಳು, ಬಸವಾದಿ ಶರಣ ವಚನಾಮೃತಗಳು ಬದುಕಿಗೆ ದಾರಿ ದೀಪ. 12ನೇ ಶತಮಾನದಲ್ಲಿ ಲಿಂಗಾಯತ ಧರ್ಮ ಸ್ಥಾಪನೆ ಮಾಡಿದ ಬಸವಣ್ಣ, ವಚನಗಳ ಮೂಲಕ ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಬಸವಾದಿ ಶರಣರು ಸ್ವರಚಿತ ವಚನಗಳು ಇಂದಿಗೂ ಹೆಚ್ಚು ಪ್ರಸ್ತುತತೆಯನ್ನು ಪಡೆದುಕೊಂಡಿವೆ. ಶರಣರ ಅನುಭವದ ನುಡಿಗಳೇ ವಚನಗಳಾಗಿವೆ. ಇಂಥ ವಚನ ಗಾಯನವನ್ನು ಕೆಸ್ತೂರಿನ ಬಸವೇಶ್ವರ ಸಾಂಸ್ಕೃತಿಕ ಕಲಾ ಸಂಘದವರು ಬಹಳ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ'ಎಂದು ಶುಭ ಕೋರಿದರು.

ಕಲಾವಿದರಾದ ಎಂ. ಪರಶಿವಪ್ಪ, ಮಹದೇವ ಸ್ವಾಮಿ, ಬಸವಣ್ಣ, ಕೆ. ಶಾಂತಮೂರ್ತಿ,ಹಾರ್ಮೋನಿಯಂ ಮಹದೇವ ಸ್ವಾಮಿ, ಕೊಮಾರನಪುರ, ಕ್ಯಾಸಿಯೋ ಮಲ್ಲಿಕಾರ್ಜುನ ಬೀರಾಹಳ್ಳಿ, ಕೆ.ಎಸ್. ಪುಟ್ಟಣ್ಣ ಕೆಸ್ತೂರು, ಘಟಂ ಕೆ.ಎಸ್. ನಾಗರಾಜು, ಕಾರ್ಯಕ್ರಮ ನಡೆಸಿಕೊಟ್ಟರು. ಗ್ರಾಮಸ್ಥರು ಹಾಗೂ ಮಠದ ಭಕ್ತರು ಉಪಸ್ಥಿತರಿದ್ದರು.



# ಕ್ರೀಡೆಯಲ್ಲಿ ಸಕ್ರಿಯರಾದರೆ ಉತ್ತಮ ಆರೋಗ್ಯಕ್ಕೆ ಸಹಕಾರಿ: ಫಾದರ್



ಗುಂಡ್ಲುಪೇಟೆ ಕ್ರೈಸ್ಟ್ ಸಿಎಂಐ ಪಬ್ಲಿಕ್ ಶಾಲೆಯಲ್ಲಿ ಬೇಸಿಗೆ ಶಿಬಿರದಲ್ಲಿ ಶಿಬಿರಾರ್ಥಿಗಳೊಂದಿಗೆ ರೆವರೆಂಡ್ ಫಾದರ್ ರಿಜೀಶ್ ಪುತಿಯಾಪರಂಬಿಲ್ ಇದ್ದಾರೆ.

• **ಕನ್ನಡಪ್ರಭ ವಾರ್ತೆ** ಗುಂಡ್ಲುಪೇಟೆ

ಕ್ರೀಡೆಯಲ್ಲಿ ಸಕ್ರಿಯರಾದರೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿ ಎಂದು ಕ್ರೈಸ್ಟ್ ಸಿಎಂಐ ಪಬ್ಲಿಕ್ ಶಾಲಾ ಮುಖ್ಯ ಶಿಕ್ಷಕ ರೆವರೆಂಡ್ ಫಾದರ್ ರಿಜೀಶ್ ಪುತಿಯಾಪರಂಬಿಲ್ ಹೇಳಿದರು.

ಪಟ್ಟಣದ ಕ್ರೈಸ್ಟ್ ಸಿಎಂಐ ಪಬ್ಲಿಕ್ ಶಾಲೆಯಲ್ಲಿ 3ನೇ ವರ್ಷದ ಕ್ರೀಡಾ ಶಿಬಿರದ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಬೇಸಿಗೆ ಶಿಬಿರ ಏ.ರಿಂದ ಮೇ 6ರ ತನಕ (1 ತಿಂಗಳು) ಯಶಸ್ವಿಯಾಗಿ ನಡೆದಿದೆ ಎಂದರು. ಬೇಸಿಗೆ ಶಿಬಿರದಲ್ಲಿ ಬಾಸ್ಕೆಟ್ ಬಾಲ್, ಹ್ಯಾಂಡ್ ಬಾಲ್, ನೆಟ್‌ಬಾಲ್, ಧ್ಯಾನ, ಪ್ರಾಣಾಯಾಮ, ಮನರಂಜನೆ ಕ್ರೀಡೆಗಳು, ಒಂದು ದಿನದ ಚಾರಣ, ಹೀಗೆ ಹಲವಾರು ಕ್ರೀಡೆಗಳಿಗೆ ತರಬೇತಿಯನ್ನೂ ನೀಡಲಾಯಿತು ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಮತ್ತು ತರಬೇತಿದಾರ ದೊಡ್ಡಪ್ಪಾಜಿ, ಶಿಕ್ಷಕ ಮಹೇಶ ಹಾಗೂ ಶಿಬಿರಾರ್ಥಿಗಳು ಭಾಗವಹಿಸಿದ್ದರು.

# ರಬ್ಬಾನಿಯ ಇಸ್ಲಾಮಿಕ್ ಶಾಲೆಯ 96 ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಅಭಿನಂದನೆ



ಗುಂಡ್ಲುಪೇಟೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಬಿಇಒ ಟಿ.ಆರ್. ಸ್ವಾಮಿ ವಿತರಿಸಿದರು.

• **ಕನ್ನಡಪ್ರಭ ವಾರ್ತೆ** ಗುಂಡ್ಲುಪೇಟೆ

ಪಟ್ಟಣದ ಮದರಸ ರಬ್ಬಾನಿಯ ಇಸ್ಲಾಮಿಕ್ ಶೈಕ್ಷಣಿಕ ಸಂಸ್ಥೆಯು 2025-26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ 96 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದೆ.

ಪಟ್ಟಣದ ಕೋಡಹಳ್ಳಿ ಸರ್ಕಲ್ ಬಳಿ ನಡೆದ ಸಮಾರಂಭದಲ್ಲಿ ಪಟ್ಟಣದ ವ್ಯಾಪ್ತಿಯ ಶಾಲಾ ಹಾಗೂ ಪದವಿ ಪೂರ್ವ ಕಾಲೇಜಿನ ಒಟ್ಟು 96 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ ವಿತರಿಸಿ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಡಾ.ಎಚ್.ಟಿ. ಸರೋಜಾ, ಪ್ರಧಾನ ಮಂತ್ರಿ ಪೋಷಣ್ ಅಭಿಯಾನದ ಸಹಾಯಕ ನಿರ್ದೇಶಕ ಸತೀಶ್, ಶಿಕ್ಷಣ ಸಂಯೋಜಕ ದುಂಡು ಮಹದೇವ, ರಮೇಶ್, ನಾಗೇಂದ್ರ, ಮದರಸದ ಮುಖ್ಯಸ್ಥರಾದ ಮೌಲಾನಾ ಬಶೀರ್, ಜಮೀನ್ ಹಾಗೂ ಶಿಕ್ಷಕರು ಭಾಗವಹಿಸಿದ್ದರು.

# ಕಟ್ನವಾಡಿಯಲ್ಲಿ ಅದ್ದೂರಿ ಬಸವ ಜಯಂತಿ ಮೆರವಣಿಗೆ

**ಚಾಮರಾಜನಗರ:** ತಾಲೂಕು ಕಟ್ನವಾಡಿ ಗ್ರಾಮದಲ್ಲಿ ಅದ್ದೂರಿ ಬಸವ ಜಯಂತಿ ಮೆರವಣಿಗೆ ನಡೆಯಿತು.



ಗ್ರಾಮದ ಶ್ರೀ ಮಠದ ಮುಂಭಾಗದಿಂದ ಹೊರಟ ಶ್ರೀ ಬಸವೇಶ್ವರ ಮೆರವಣಿಗೆಗೆ ಮರಿಯಾಲದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಚಾಮರಾಜನಗರ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಕಬ್ಬಹಳ್ಳಿ ಮಠದ ಶ್ರೀ ಮಹದೇವ ಸ್ವಾಮೀಜಿ ಅವರು ಬಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾತಂಡಗಳು, ನಂದಿಧ್ವಜ, ವೀರಗಾಸೆ ಮಂಗಳ ವಾದ್ಯಗಳ ಮೂಲಕ ಮೆರವಣಿಗೆ ನಡೆಯಿತು. ಗ್ರಾಮದ ಯುವಕರು ಮತ್ತು ಮುಖಂಡರು ಭಾಗವಹಿಸಿದ್ದರು.

# 28ಕ್ಕೆ ಉಚಿತ ಅಕ್ಷರಾಭ್ಯಾಸ

**ಗುಂಡ್ಲುಪೇಟೆ:** ಪಟ್ಟಣದ ರಾಘವೇಂದ್ರ ಮಠದಲ್ಲಿ ಮೇ 28ರ ಬೆಳಗ್ಗೆ 8.30ರಿಂದ ಮಕ್ಕಳಿಗೆ ಉಚಿತ ಸಾಮೂಹಿಕ ಅಕ್ಷರಾಭ್ಯಾಸ ಏರ್ಪಡಿಸಲಾಗಿದೆ. ಪೋಷಕರು ತಮ್ಮ ಮಕ್ಕಳೊಡನೆ ಸಾಂಪ್ರದಾಯಿಕ ಉಡುಗೆಯಲ್ಲಿ, ಸ್ಲೇಟು ಬಳಪ ಅಥವಾ ಅಕ್ಕಿ ಅರಶಿಣದ ಕೊಂಬು ತರಬೇಕು. ಗುಂಡ್ಲುಪೇಟೆ ಪಟ್ಟಣ ಹಾಗೂ ಸುತ್ತಲಿನ ಗ್ರಾಮಸ್ಥರು ಉಚಿತ ಸಾಮೂಹಿಕ ಅಕ್ಷರಾಭ್ಯಾಸ ಸದುಪಯೋಗ ಪಡಿಸಿಕೊಳ್ಳಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ರಾಜೇಶ್ವರಿ ಚಂದ್ರಶೇಖರ್‌ರನ್ನು 9448046147 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.



## ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

CIN : L65110TN2014PLC097792

ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್: +91 44 4564 4022

### 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

| ಕ್ರ. ಸಂ. | ಸಾಲ ಖಾತೆ ಸಂ. | ಸಾಲದ ವಿಧ | ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು | ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ | ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ |
|---|---|---|---|---|---|
| 1 | 118389415 | ಆಸ್ತಿ ಎದುರಾಗಿ ಸಾಲ | 1. ಮಹಾದೇವಮ್ಮ ಆರ್<br>2. ರಂಗಸ್ವಾಮಿನಾಯಕ ಬಿ | 23.04.2026 | ಐಎನ್‌ಆರ್ 4,99,878.88/- |
| ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಅಸೆಸ್‌ಮೆಂಟ್ ಸಂ. 669, ಆರ್‌ಡಿಪಿಆರ್ ಸಂ.150800104100100956, ನಂಜೆದೇವನಪುರ ಗ್ರಾಮ ಪಂಚಾಯತ್ ಕಚೇರಿಯಿಂದ ನೀಡಲಾದ ಫಾರಂ ಸಂಖ್ಯೆ 11ಬಿ ಪ್ರಕಾರ, ತಮ್ಮಡಹಳ್ಳಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ: ಚಾಮರಾಜನಗರ, ಕರ್ನಾಟಕ-571128, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ -9.144 ಮೀ. ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.192 ಮೀ.ಗಳು, ಒಟ್ಟು ಅಳತೆ: 111.46 ಚ.ಮೀ.ಗಳು ಸೇರಿದಂತೆ ಕಟ್ಟಡದ ಅಳತೆ: 111.46 ಚ.ಮೀ.ಗಳು, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಾಗಮ್ಮ W/o ಬೆಳ್ಳನಾಯ್ಕ್‌ರವರ ಖಾಲಿ ನಿವೇಶನ, ಪಶ್ಚಿಮಕ್ಕೆ: ಬಸವನಾಯಕನವರ ಮನೆ, ಉತ್ತರಕ್ಕೆ: ಟಿ.ಪಿ. ಸುಬ್ಬನಾಯ್ಕನವರ ಆಸ್ತಿ, ದಕ್ಷಿಣಕ್ಕೆ- ರಸ್ತೆ. | | | | | |
| 2 | 145099180 | ಆಸ್ತಿ ಎದುರಾಗಿ ಸಾಲ | 1. ನಾಗೇಂದ್ರ ಬಿ<br>3. ಶಶಿಕಲಾ ಎನ್ | 13.04.2026 | ಐಎನ್‌ಆರ್ 8,71,992.63/-/- |
| ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಅಸೆಸ್ಮೆಂಟ್ ಸಂ. 87/ಬಿ2, ಆರ್‌ಡಿಪಿಆರ್ ಸಂ. 150800400300620048, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಚೇರಿಯಿಂದ ನೀಡಲಾದ ಫಾರಂ ಸಂಖ್ಯೆ 9 ಮತ್ತು 11ಎ ಪ್ರಕಾರ, ದುಗ್ಗಹಟ್ಟಿ ಗ್ರಾಮ ಪಂಚಾಯತ್, ದುಯಂ ಕಂದಹಳ್ಳಿ ಗ್ರಾಮ, ಯಳಂದೂರು ತಾಲ್ಲೂಕು ಮತ್ತು ಚಾಮರಾಜನಗರ ಜಿಲ್ಲೆ ಕರ್ನಾಟಕ - 571441, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ-10.363 ಮೀ.ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ :6.400 ಮೀ.ಗಳು, ಒಟ್ಟು ಅಳತೆ: 66.33 ಚದರ ಮೀ.ಗಳು ಕಟ್ಟಡದ ಅಳತೆ: 66.33 ಚದರ ಮೀ.ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಾಗಮ್ಮ W/o ಬಂಗಾರನಾಯಕನವರ ಮನೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಭಾಗ್ಯ W/o ಲೇಟ್ ಬಿಳಿಗಿರಿರಂಗನಾಯಕರವರ ಮನೆ. | | | | | |

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್ , ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನ ಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 07.05.2026
ಸ್ಥಳ: ಚಾಮರಾಜನಗರ, ಕರ್ನಾಟಕ

## ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

CIN : L65110TN2014PLC097792

ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್: +91 44 4564 4022

### 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

| ಕ್ರ. ಸಂ. | ಸಾಲ ಖಾತೆ ಸಂ. | ಸಾಲದ ವಿಧ | ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು | ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ | ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ |
|---|---|---|---|---|---|
| 1 | 159677487 & 106598387 | ಆಸ್ತಿ ಎದುರಾಗಿ ಸಾಲ | 1. ರತ್ನಮ್ಮ ಎಸ್,<br>2. ಶಿವಮಲ್ಲು ಎಸ್ | 17.04.2026 | ಐಎನ್‌ಆರ್ 7,88,978.02/- |
| ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಖಾತಾ ಸಂ.-216/67, ಯುನಿಕ್ ಐಡಿ ಸಂ.152200511149000130, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 12.192 ಮೀ.ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.144 ಮೀ.ಗಳು, ಒಟ್ಟು ಅಳತೆ 111.48 ಚ.ಮೀ.ಗಳು, ಕಟ್ಟಡದ 94.78 ಚದರ ಮೀಟರ್‌ಗಳ ಅಳತೆಯುಳ್ಳ ಕಟ್ಟಡ ಸೇರಿದಂತೆ, ಬೆಳಗುಂಡ ಗ್ರಾಮ, ಬಿಳಿಗೆರೆ ಗ್ರಾಮ ಪಂಚಾಯಿತಿ, ಬಿಳಿಗೆರೆ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಕರ್ನಾಟಕ- 571129 ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿಂಗಯ್ಯನವರ ಖಾಲಿ ನಿವೇಶನ, ಪಶ್ಚಿಮಕ್ಕೆ: ಬಸವಯ್ಯನವರ ಮನೆ ಉತ್ತರಕ್ಕೆ: ನಂಜಯ್ಯನವರ ಮನೆ, ದಕ್ಷಿಣಕ್ಕೆ: ರಸ್ತೆ. | | | | | |
| 2 | 162183869 | ಆಸ್ತಿ ಎದುರಾಗಿ ಸಾಲ | 1. ಮಂಜು ವಿ<br>2. ಯಶೋಧ ಎಂ | 13.04.2026 | ಐಎನ್‌ಆರ್ 9,45,164.66/- |
| ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಖಾತಾ ಸಂ. 193/193, ಇ-ಖಾತಾ ಸಂ. 152200200500900222, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 8.08 ಮೀ.ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 11.28 ಮೀಟರ್‌ಗಳು, ಒಟ್ಟು ಅಳತೆ 91.09 ಚ.ಮೀ.ಗಳು ಮತ್ತು 91.09 ಚದರ ಮೀಟರ್‌ಗಳ ಅಳತೆಯುಳ್ಳ ಕಟ್ಟಡ ಸೇರಿದಂತೆ, ರಂಗಯ್ಯನಕೊಪ್ಪಲು ಗ್ರಾಮ, ಬಿಳಿಕೆರೆ ಹೋಬಳಿ, ಬೋಳನಹಳ್ಳಿ ಗ್ರಾಮ ಪಂಚಾಯತ್ ಮಿತಿಗೊಳಪಟ್ಟಿದೆ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಕರ್ನಾಟಕ- 571103, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಗಲ್ಲಿ ಮತ್ತು ಸಿದ್ದಯ್ಯನವರ ಮನೆ, ಪಶ್ಚಿಮಕ್ಕೆ: ಗಲ್ಲಿ ಮತ್ತು ಶಿವಯ್ಯನವರ ಮನೆ ಉತ್ತರಕ್ಕೆ: ಗಲ್ಲಿ ಮತ್ತು ಸುಶೀಲಮ್ಮನ ಮನೆ ದಕ್ಷಿಣಕ್ಕೆ: ರಸ್ತೆ. | | | | | |

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್ , ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 07.05.2026
ಸ್ಥಳ: ಮೈಸೂರು-ಕರ್ನಾಟಕ



## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿಗಾರರಾದ ಶ್ರೀ ಅರುಣ್ ರಘು ಹಾಗೂ ಡಾ. ಶ್ವೇತಾ ಲೂಥ್ರರವರುಗಳು ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿಯನ್ನು ಅದರ ಸಂಪೂರ್ಣ ಮಾಲೀಕರು ತಾವೇ ಎಂದು ತಿಳಿಸುವ ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ಪುಟ್ಟಸ್ವಾಮಪ್ಪ ಎಂಬುವವರಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ. ಸದರಿ ಖರೀದಿಗೆ ವಿರೋಧಿಸುವ ಯಾವುದೇ ವ್ಯಕ್ತಿ ಯಾ ಸಂಸ್ಥೆ ಅಥವಾ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ಹಕ್ಕು, ಸ್ವಾಮ್ಯ, ಆಸಕ್ತಿ, ಮಾಲೀಕತ್ವ, ಕ್ಲೇಮು ಇತ್ಯಾದಿಗಳನ್ನು ಹೊಂದಿರುವ ಯಾವನೇ ವ್ಯಕ್ತಿ ಯಾ ಸಂಸ್ಥೆ ಈ ಕೆಳಸಹಿದಾರರಿಗೆ, ಈ ಪ್ರಕಟಣೆಯ 5(ಐದು) ದಿನಗಳೊಳಗಾಗಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ಲಿಖಿತ ಮಾಹಿತಿ/ತಕರಾರು ನೀಡಲು ತಿಳಿಸಿದೆ. ತಪ್ಪಿದಲ್ಲಿ, ಮೇಲೆ ಹೆಸರಿಸಲಾದ ಮಾಲೀಕರೇ ಈ ಕೆಳಕಂಡ ಸ್ಥಿರಾಸ್ತಿಯ ಸಂಪೂರ್ಣ ಮಾಲೀಕರಂತಲೂ ಹಾಗೂ ಸದರಿ ಸ್ಥಿರಾಸ್ತಿಯ ಮೇಲೆ ಯಾವನೇ ವ್ಯಕ್ತಿ ಯಾ ಸಂಸ್ಥೆಗೆ ಯಾವುದೇ ರೀತಿಯ ಹಕ್ಕು ಆಸಕ್ತಿ, ಕ್ಲೇಮು ಇತ್ಯಾದಿಗಳು ಇಲ್ಲವೆಂದೂ, ಒಂದು ವೇಳೆ ಇದ್ದಲ್ಲಿ ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಮನ್ನಾ ಮಾಡಲಾಗಿದೆಯೆಂದು ತಿಳಿದು ಖರೀದಿ ಪ್ರಕ್ರಿಯೆಯನ್ನು ಸಮಾಪ್ತಿಗೊಳಿಸಲಾಗುವುದು.

**ಸ್ಥಿರಾಸ್ತಿಯ ವಿವರ:** ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಅಂತರಸಂತೆ ಹೋಬಳಿ, ಎನ್. ಬೇಗೂರು ಗ್ರಾಮದ ಸರ್ವೆ ನಂಬರ್59/2ರಲ್ಲಿನ 1 (ಒಂದು) ಎಕರೆ 29 (ಇಪ್ಪತ್ತೊಂಬತ್ತು) ಗುಂಟೆ ಖುಷ್ಕಿ ಕೃಷಿ ಜಮೀನಿಗೆ ಚೆಕ್ಕುಬಂದಿ

ಪೂರ್ವಕ್ಕೆ : ಸರ್ವೆ ಸಂಖ್ಯೆ 61ರ ಜಮೀನು;
ಪಶ್ಚಿಮಕ್ಕೆ : ಸರಕಾರಿ ರಸ್ತೆ;
ಉತ್ತರಕ್ಕೆ : ಸರ್ವೆ ಸಂಖ್ಯೆ 59/3ರ ಜಮೀನು ಹಾಗೂ
ದಕ್ಷಿಣಕ್ಕೆ: ಸರ್ವೆ ಸಂಖ್ಯೆ 59/1ರ ಜಮೀನು

ಸಹಿ/- ಕು. ನವ್ಯ ಶೆಟ್ಟಿರಾಜು,
Solv. ವಕೀಲರು ಹಾಗೂ ಕಾನೂನು ಸಲಹೆಗಾರರು
ನಂ. 45, 1ನೇ ಮಹಡಿ, 19ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಬಿ.ಟಿ.ಎಂ 2ನೇ ಹಂತ,
ಬೆಂಗಳೂರು 5600076
ದೂರವಾಣಿ: +91 98800 12694
E-mail: info@solvadvocates.in
ಸ್ಥಳ: ಬೆಂಗಳೂರು ದಿನಾಂಕ: 06-05-2026

## ಬ್ಯಾಂಕ್ ಆಫ್ ಬರೋಡ

बैंक ऑफ़ बड़ौदा Bank of Baroda

ಇಂಡಸ್ಟ್ರಿಯಲ್ ಸಬ್‌ಅರ್ಬ್ ಶಾಖೆ

ಪ್ರಾದೇಶಿಕ ಕಛೇರಿ, ಬರೋಡಾ ಸೌಧ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು-09. ದೂರವಾಣಿ: 0821-2571919
ಇ-ಮೇಲ್: recovery.mysuru@bankofbaroda.com, Website: www.bankofbaroda.com

### ಸ್ವಾಧೀನ ಸೂಚನೆ (ಸ್ಥಿರಾಸ್ತಿಗಾಗಿ)

ಅಧಿಕೃತ ಅಧಿಕಾರಿಗಳು **ಬ್ಯಾಂಕ್ ಆಫ್ ಬರೋಡ, ಇಂಡಸ್ಟ್ರಿಯಲ್ ಸಬ್‌ಅರ್ಬ್ ಶಾಖೆ,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 (ಆರ್ಡಿನರ್ 3ರ 2002) ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002ರ ನಿಯಮ 9 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ **ದಿನಾಂಕ: 25.02.2026** ರಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.17,49,644.41 (ರೂಪಾಯಿ ಹದಿನೇಳು ಲಕ್ಷದ ನಲವತ್ತೊಂಭತ್ತು ಸಾವಿರದ ಆರುನೂರ ನಲವತ್ತನಾಲ್ಕು ಮತ್ತು ನಲವತ್ತೊಂದು ಪೈಸೆ ಮಾತ್ರ)** ಜೊತೆಗೆ **ದಿನಾಂಕ: 22.02.2026** ರಿಂದ ಮುಂದಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳನ್ನು ಪಾವತಿ ಮಾಡಲು **ಸಾಲಗಾರರು/ಅಡಮಾನುದಾರರು/ ಜಾಮೀನುದಾರರು: (1) ಶ್ರೀ ಮೋಹನ್ ಕುಮಾರ್ ಎನ್** ಬಿನ್ ಲೇಟ್ ಶ್ರೀ ನರಸಿಂಹಯ್ಯ **(ಸಾಲಗಾರರು), (2) ಶ್ರೀಮತಿ ಸವಿತಾ ಎನ್** ಕೋಂ ಮೋಹನ್ ಕುಮಾರ್ ಎನ್ **(ಜಾಮೀನುದಾರರು), ಇವರಿಬ್ಬರ ವಿಳಾಸ :** ನಂ.1038/ಎ, 32ನೇ ಕ್ರಾಸ್, 4ನೇ ಮೇನ್, 4ನೇ ಮುಖ್ಯ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು-570008., ಇವರಿಗೆ **ದಿನಾಂಕ : 25.02.2026** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಿಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಕಲಂ 13(4) ರೊಂದಿಗೆ ನಿಯಮ 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 06.05.2026** ರಂದು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾಲಗಾರರು ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರು ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಬ್ಯಾಂಕ್ ಆಫ್ ಬರೋಡ** ಇವರಿಗೆ ಸಂದಾಯವಾಗತಕ್ಕ ಮೊಬಲಗು **ರೂ. 17,16,417.77 (ರೂಪಾಯಿ ಹದಿನೇಳು ಲಕ್ಷದ ಹದಿನಾರು ಸಾವಿರದ ನಾಲ್ಕುನೂರ ಹದಿನೇಳು ಮತ್ತು ಎಪ್ಪತ್ತೇಳು ಪೈಸೆ ಮಾತ್ರ) ದಿನಾಂಕ: 26.04.2026** ರಿಂದ ಬಡ್ಡಿ ಹಾಗೂ ಇತರೆ ವೆಚ್ಚಗಳು.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13(8)ರ ಅನ್ವಯ ಇರುತ್ತದೆ.

**ಸ್ಥಿರಾಸ್ತಿಯ ವಿವರ:**

ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮನೆಯ ಆಸ್ತಿ ನಂ.1038/ಎ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 25 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಈ ಆಸ್ತಿಯು 32ನೇ ಕ್ರಾಸ್, 4ನೇ ಮೇನ್, ವಿದ್ಯಾರಣ್ಯಪುರಂ, ಫೋರ್ಟ್ ಮೊಹಲ್ಲಾ, ಮೈಸೂರು-570008ರಲ್ಲಿದ್ದು, ಶ್ರೀ ಮೋಹನ್ ಕುಮಾರ್ ಎನ್ ಬಿನ್ ಲೇಟ್ ನರಸಿಂಹಯ್ಯರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.1039, ಪಶ್ಚಿಮಕ್ಕೆ: ಆಸ್ತಿ ನಂ.1037, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ನಂ.1055.

ದಿನಾಂಕ : 06.05.2026
ಸ್ಥಳ : ಮೈಸೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ






# ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ನೆರವಾಗಲಿದೆ 'ಅಭ್ಯುದಯ':ಡೀಸಿ

## ಪಿಯು, ಪದವಿ ವಿದ್ಯಾರ್ಥಿಗಳಿಗೆ ಅರಿವು, ತಯಾರಿ ಕಾರ್ಯಕ್ರಮ



ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವು ಮತ್ತು ತಯಾರಿಯನ್ನು ಉತ್ತೇಜಿಸಲು 'ಅಭ್ಯುದಯ' ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶ್ರೀರೂಪಾ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆತ್ಮವಿಶ್ವಾಸ, ಧೈರ್ಯದಿಂದ ಎದುರಿಸಿ ಪ್ರಗತಿ ಸಾಧಿಸಲು 'ಅಭ್ಯುದಯ' ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ನೆರವಾಗಲಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪಾ ತಿಳಿಸಿದರು.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವು ಮತ್ತು ತಯಾರಿಯನ್ನು ಉತ್ತೇಜಿಸಲು 'ಅಭ್ಯುದಯ' ಶೀರ್ಷಿಕೆಯಡಿ ಏರ್ಪಡಿಸಲಾಗಿದ್ದ ಜಾಗೃತಿ ಹಾಗೂ ಮಾರ್ಗದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದು ಚಾಮರಾಜನಗರ ಜಿಲ್ಲೆಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ದಿನವಾಗಿದೆ. ಅಭ್ಯುದಯ ಎಂದರೇ ಪ್ರಗತಿ,ಸಮೃದ್ಧಿ. ವಿದ್ಯಾರ್ಥಿಗಳುಸಾಮಾನ್ಯವಾಗಿ ಪದವಿ ಬಳಿಕ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲಿದ್ದು, ಇದು ಉತ್ತಮ ಹಾಗೂ ಉನ್ನತ ಉದ್ಯೋಗಾವಕಾಶಗಳನ್ನು ಪಡೆಯಲು ವಿಳಂಬವಾಗಲಿದೆ. ಇದಕ್ಕೆ ಪರ್ಯಾಯವಾಗಿ ಪದವಿಪೂರ್ವ ಹಂತದಲ್ಲಿಯೇ ಪರಿಶ್ರಮದ ವಿಧಾನಗಳು, ಜಾಗೃತಿ ಹಾಗೂ ಮಾರ್ಗದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿದೆ. ಈ ನಿಟ್ಟನಲ್ಲಿ ಮೊದಲ ಹೆಜ್ಜೆ ಇಡಲಾಗಿದೆ. ಇದರ ಸದ್ಬಳಕೆಯಾಗಬೇಕು ಎಂದರು.

ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಸಾಕಷ್ಟು ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ಸೂಕ್ತ, ಕ್ರಮಬದ್ಧವಾದ ಮಾರ್ಗದರ್ಶನದ ಕೊರತೆಯಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಹಿಂದೆ ದೆಹಲಿ, ಚೆನ್ನೈನಂಥ ದೊಡ್ಡ ನಗರಗಳಿಗೆ ತೆರಳಬೇಕಾಗಿತ್ತು. ಈಗ ಜಿಲ್ಲಾಡಳಿತ ನಿಮ್ಮ ಮನೆ ಬಾಗಿಲಿನಲ್ಲಿಯೇ ಈ ಸದಾವಕಾಶ ಒದಗಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು ಮತ್ತು ಮಾರ್ಗದರ್ಶನ ಪಡೆದು ಜಿಲ್ಲೆಯ ಪ್ರತಿಹಳ್ಳಿಗೂ ಒಬ್ಬರು ಅಥವಾ ಇಬ್ಬರು ಉನ್ನತ ಹುದ್ದೆ ಪಡೆದರೆ ಆಯಾ ಗ್ರಾಮೀಣ ಪ್ರದೇಶಗಳ ಚಿತ್ರಣವೇ ಬದಲಾಗಲಿದೆ. ಇದು ಜಿಲ್ಲೆಯ ಅಭಿವೃದ್ಧಿಗೂ ಪೂರಕವಾಗಿದೆ ಎಂದು ಜಿಲ್ಲಾಧಿಕಾರಿಯವರು ಹೇಳಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಇಂಡಿಯಾ ಫಾರ್ ಐಎಎಸ್ ಅಕಾಡಮಿಯ ನಾರಾಯಣ ಪ್ರಸಾದ್, ಸಂಪನ್ಮೂಲ ವ್ಯಕ್ತಿ ದೀಪಕ್, ವಿಷಯ ಪರಿವೀಕ್ಷಕರಾದ ಅಂಥಾಲಿ, ಕನಕ್ಪಾ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಯುನೈಟೆಡ್ ಬ್ರೂಯರೀಸ್ ಲಿಮಿಟೆಡ್

Registered office: UB Tower, UB City, #24 Vittal Mallya Road, Bengaluru - 560001.
Phone: 080 - 45655000 Fax: 080 - 22211964, 22229488.
CIN: L36999KA1999PLC025195 Email: ublinvestor@ubmail.com Website: www.unitedbreweries.com

**ಮಾರ್ಚ್ 31, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷಕ್ಕೆ ಕೊನೆಗೊಂಡ ಏಕೀಕೃತ ಹಾಗೂ ಒಟ್ಟುಗೂಡಿಸಿದ ಹಣಕಾಸು ಫಲಿತಾಂಶಗಳ ಪ್ರಕಟಣೆ**

(₹. ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | ಏಕೀಕೃತ | | | | ಒಟ್ಟುಗೂಡಿಸಿದ | | | |
|---|---|---|---|---|---|---|---|---|---|
| | | ತ್ರೈಮಾಸಿಕಕ್ಕೆ ಕೊನೆಗೊಂಡ | | ವರ್ಷಕ್ಕೆ ಕೊನೆಗೊಂಡ | | ತ್ರೈಮಾಸಿಕಕ್ಕೆ ಕೊನೆಗೊಂಡ | | ವರ್ಷಕ್ಕೆ ಕೊನೆಗೊಂಡ | |
| | | ಮಾರ್ಚ್ 31,2026 | ಮಾರ್ಚ್ 31,2025 | ಮಾರ್ಚ್ 31,2026 | ಮಾರ್ಚ್ 31,2025 | ಮಾರ್ಚ್ 31,2026 | ಮಾರ್ಚ್ 31,2025 | ಮಾರ್ಚ್ 31,2026 | ಮಾರ್ಚ್ 31,2025 |
| | | ಅಪರಿಶೋಧಿತ* | | ಪರಿಶೋಧಿತ | | ಅಪರಿಶೋಧಿತ* | | ಪರಿಶೋಧಿತ | |
| 1 | ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 4,41,396 | 4,43,338 | 17,50,084 | 19,43,650 | 4,41,656 | 4,43,516 | 17,50,866 | 19,44,444 |
| 2 | ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ ಮತ್ತು ಅಸಾಧಾರಣ ವಸ್ತುಗಳು | 4,201 | 13,155 | 50,658 | 62,911 | 4,228 | 13,207 | 50,698 | 63,087 |
| 3 | ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ ಮತ್ತು ನಂತರ ಅಸಾಧಾರಣ ವಸ್ತುಗಳು | 11,605 | 13,155 | 56,189 | 60,335 | 11,632 | 13,207 | 56,229 | 60,511 |
| 4 | ತೆರಿಗೆಗೆ ನಂತರದ ಅವಧಿಗೆ ನಿವ್ವಳ ಲಾಭ ಮತ್ತು ನಂತರ ಅಸಾಧಾರಣ ವಸ್ತುಗಳು | 10,167 | 9,738 | 41,316 | 44,117 | 10,187 | 9,776 | 41,339 | 44,241 |
| 5 | ತೆರಿಗೆಯ ನಂತರದ ಒಟ್ಟು ಸಮಗ್ರ ಆದಾಯ (ಲಾಭವನ್ನು ಒಳಗೊಂಡಿರುತ್ತದೆ ಅವಧಿಗೆ (ತೆರಿಗೆಯ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ) | 9,718 | 9,659 | 42,257 | 44,356 | 9,740 | 9,696 | 42,282 | 44,479 |
| 6 | ಈಕ್ವಿಟಿ ಷೇರು ಬಂಡವಾಳ | 2,644 | 2,644 | 2,644 | 2,644 | 2,644 | 2,644 | 2,644 | 2,644 |
| 7 | ಮೀಸಲು (ಮರುಮೌಲ್ಯಮಾಪನ ಮೀಸಲು ಹೊರತು ಪಡಿಸಿ) | – | – | 4,49,087 | 4,33,271 | – | – | 4,49,566 | 4,33,748 |
| 8 | ಪ್ರತಿ ಷೇರಿಗೆ ಗಳಿಕೆಗಳು (ಪ್ರತಿಯೊಂದಕ್ಕೆ ರೂ 1/–) (ವಾರ್ಷಿಕವಲ್ಲ) | | | | | | | | |
| | (ಎ) ಮೂಲಭೂತ | 3.85 | 3.69 | 15.63 | 16.69 | 3.85 | 3.69 | 15.63 | 16.71 |
| | (ಬಿ) ಡೈಲ್ಯೂಟೆಡ್ | 3.85 | 3.69 | 15.63 | 16.69 | 3.85 | 3.69 | 15.63 | 16.71 |

*ಸಂಪೂರ್ಣ ಆರ್ಥಿಕ ಫಲಿತಾಂಶಗಳ ಟಿಪ್ಪಣಿ 10ಅನ್ನು ನೋಡಿ.

ಟಿಪ್ಪಣಿ:

(ಎ). ಮೇಲಿನವು 2015ರ ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಬಂಧನೆಗಳ ನಿಯಮ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ತ್ರೈಮಾಸಿಕ ಮತ್ತು ವರ್ಷಾಂತ್ಯದ ಆರ್ಥಿಕ ಫಲಿತಾಂಶಗಳ ವಿವರವಾದ ಸ್ವರೂಪದ ಸಾರಾಂಶವಾಗಿದೆ. ತ್ರೈಮಾಸಿಕ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳ ಪೂರ್ಣ ಸ್ವರೂಪವು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಹಾಗೂ ಕಂಪನಿಯ ವೆಬ್‌ಸೈಟ್ www.unitedbreweries.com ನಲ್ಲಿ ಲಭ್ಯವಿವೆ.

(ಬಿ). ಈ ಕೆಳಗಿನ ಕ್ಯೂ ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಸಂಪೂರ್ಣ ಫಲಿತಾಂಶವನ್ನು ವೀಕ್ಷಿಸಬಹುದು :

ಸ್ಥಳ : ಬೆಂಗಳೂರು
ದಿನಾಂಕ : ಮೇ 05, 2026

ಮಂಡಳಿಯ ಆದೇಶದ ಮೇರೆಗೆ
ಯುನೈಟೆಡ್ ಬ್ರೂಯರೀಸ್ ಲಿಮಿಟೆಡ್ ನ ಪರವಾಗಿ
ಸಹಿ/–
**ವಿವೇಕ್ ಗುಪ್ತಾ**
**ವ್ಯವಸ್ಥಾಪಕ ನಿರ್ದೇಶಕರು**

# 9ಕ್ಕೆ ಮೈಸೂರಿನಲ್ಲಿ ಸಿತಾರ್ ಸಂಭ್ರಮ

ಮೈಸೂರು: ಕುವೆಂಪುನಗರದ ಕಲಾ ಸಂವಹನ ಟ್ರಸ್ಟ್ ವತಿಯಿಂದ ಮೇ 9 ರಂದು ಸಂಜೆ 5ಕ್ಕೆ ನಗರದ ಕಲಾ ಮಂದಿರದಲ್ಲಿ ಮೈಸೂರು ಸಿತಾರ್ ಸಂಭ್ರಮ ಕಾರ್ಯ ಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಪದಾಧಿಕಾ ರಿ ಅರ್ಚನಾ ನಾಯಕ್ ತಿಳಿಸಿದರು.ಅಂತಾರಾಷ್ಟ್ರೀಯ ಖ್ಯಾತಿಯ ಉಸ್ತಾದ್ ಡಾ. ಮೊಹ ಸಿನ್ ಖಾನ್ ಅವರು ನಗರದಲ್ಲಿ ಸಿತಾರ್‌ಕಲಿಕೆ ತರಬೇತಿ ಆರಂಭಿಸಿ ಒಂದು ವರ್ಷ ತುಂಬಿದ ನೆನಪಿನಲ್ಲಿ ಈ ಕಾರ್ಯಕ್ರ ಮ ಆಯೋಜಿಸಲಾಗಿದೆ. ಸಿಎಂ ಸಿದ್ದರಾಮಯ್ಯ ಉದ್ಘಾಟಿಸುವರು, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹ ದೇವಪ್ಪ ಅಧ್ಯಕ್ಷತೆ ವಹಿಸು ವರು. ಸ್ವಾಮಿ ಕೃತಾ ತ್ಮಾನಂದ ಸಾನ್ನಿಧ್ಯ ವಹಿಸುವರು. ಗಾಯ ಕಿ ಎಚ್.ಆರ್. ಲೀಲಾವತಿ, ಎಂ. ಜಗನ್ನಾಥ ಶೆಣೈ ಮೊದಲಾ ದವರು ಪಾಲ್ಗೊಳ್ಳುವು ದಾಗಿ ಅವರು ಬುಧವಾರ ಸುದ್ದಿಗೋಷ್ಠಿ ಯಲ್ಲಿ ಹೇಳಿದರು. ನಂತರ ಪಂಡಿತ್ ವೆಂಕಟೇಶ್ ಕು ಮಾರ್‌ಗಾಯನ, ಸಿತಾರ್‌ಸಮೂಹ ವಾದನ ವಾದ ಸಿತಾರ್‌ಸಿಂಚನ, ಉಸ್ತಾದ್ ಮೊಹಸಿ ನ್ ಖಾನ್ ಅವರಿಂದ ಸಿತಾರ್ ವಾದನ, ಸಾಥ್ ಸಂಗೀತ್ ಕಾರ್ಯಕ್ರಮ ಜರುಗಲಿದೆ ಎಂದು ಅವರು ಮಾಹಿತಿ ನೀಡಿದರು. ಟ್ರಸ್ಟ್ ಕಾರ್ಯದರ್ಶಿ ಉಸ್ತಾ ದ್ ಡಾ. ಮೊಹಸಿನ್ ಖಾನ್, ಡಾ. ಶಬಾನ ಮೈಸೂರು, ಡಾ.ಸಿ.ಎಸ್. ಅರುಣ್ ಇದ್ದರು.

## ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ತಾಲ್ಲೂಕು: ಗೋಕಾಕ, ಜಿಲ್ಲಾ: ಬೆಳಗಾವಿ, ರಾಜ್ಯ: ಕರ್ನಾಟಕ, ಪಿನ್ – 591 307, ದೂರವಾಣಿ: 08332–225213.
ಇ–ಮೇಲ್: knnlgrbccd3.gokak@gmail.com

ಸಂಖ್ಯೆ : ಕ.ನೀ.ನಿ.ನಿ./ಜಿ.ಆರ್.ಬಿ.ಸಿ.ಸಿ.ವಿ.–3/ಡಿ.ಬಿ./ಲೆ.ಶಿ.4701 ಎಂ&ಎಂಆಯ್/ಟೆಂಡರ್/2026–27/01 ದಿನಾಂಕ : 05–05–2026

**ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ**
(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ **ಕಾರ್ಯನಿರ್ವಾಹಕ ಅಭಿಯಂತರು, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ಗೋಕಾಕ ಕಚೇರಿಯಲ್ಲಿ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಶೇಕಡಾವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು, ಕೆ.ಟಿ.ಪಿ.ಪಿ. ಕಾಯ್ದೆಯ ರೂಲ್ 28 ರನ್ವಯ ದ್ವಿ–ಲಕೋಟಿ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್‌ನ್ನು ದ್ವಿ–ಲಕೋಟಿ ವಿಧಾನದಲ್ಲಿ ಸಲ್ಲಿಸಬೇಕು.

**ಸಾಮಾನ್ಯ ಕಾಮಗಾರಿಗಳು – (02) ಸದರಿ ಕಾಮಗಾರಿಗಳ ಇಂಡೆಂಟ್ ನಂಬರಗಳು : 4409 & 4410. ಟೆಂಡರಿಗಿಟ್ಟ ಇಟ್ಟ ಅಂದಾಜು ಮೊತ್ತವು (ಜಿ.ಎಸ್.ಟಿ. ಹೊರತುಪಡಿಸಿ) ರೂ. 203.34 ಲಕ್ಷ ದಿಂದ ರೂ. 422.01 ಲಕ್ಷಗಳು ಇರುತ್ತವೆ.**

**ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3, ಗೋಕಾಕ ಕಚೇರಿಯ ಟೆಂಡರ್‌ಗಳನ್ನು ದಿನಾಂಕ : 08–05–2026 ರಿಂದ ದಿನಾಂಕ : 18–05–2026 ರಂದು 16.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ಈ ಕಚೇರಿಯಯಲ್ಲಿ ದಿನಾಂಕ : 14–05–2026, 11.00 ಗಂಟೆಗೆ ಜರುಗಿಸಲಾಗುವದು. ಟೆಂಡರ್ ಕುರಿತು ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯವು ದಿನಾಂಕ : 15–05–2026, 17.00 ಗಂಟೆಯವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ : 18–05–2026 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ದಿನಾಂಕ : 20–05–2026, 11.00 ಗಂಟೆಗೆ ತೆರೆಯಲಾಗುವದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.**

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ **https://www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರ್‌ಗಳಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು, (ಪ್ರಭಾರ)
ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3,
ಗೋಕಾಕ.

ಡಿಐಪಿಆರ್/ಬೆಳಗಾವಿ/196/ಮಣಿಪಾಲ್/2026–27



## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನೀಯರರು(ವಿ), ಕಾ ಮತ್ತು ಪಾ ವೃತ್ತ, ಹುವಿಸಕಂನಿ., ನೆಹರು ನಗರ, ಬೆಳಗಾವಿ–590010.
ದೂರವಾಣಿ ಸಂಖ್ಯೆ: 0831–2470351. ಫ್ಯಾಕ್ಸ ಸಂಖ್ಯೆ: 0831–2472493
Website: www.hescom.co.in,
E-Mail ID: seebgm.hescom@gmail.com
CORPORATE IDENTITY NUMBER(CIN): U31401KA2002SGC030437

**ಟೆಂಡರ್ ಪ್ರಕಟಣೆ**
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಅಧೀಕ್ಷಕ ಇಂಜಿನೀಯರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ., ಬೆಳಗಾವಿ ರವರಿಂದ ಬೆಳಗಾವಿ ವೃತ್ತ ವ್ಯಾಪ್ತಿಯಲ್ಲಿರುವ 33/11 ಕೆವ್ಹಿ ವಿದ್ಯುತ್ ಉಪ ಕೇಂದ್ರಗಳಲ್ಲಿನ ಪಾಳಿ ಕರ್ತವ್ಯಗಳಿಗೆ ಮತ್ತು ಸಣ್ಣ ಮಟ್ಟ ನಿರ್ವಹಣಾ ಕಾರ್ಯಗಳಿಗೆ/33ಕೆವ್ಹಿ ಮಾರ್ಗಗಳ ನಿರ್ವಹಣೆಗೆ ಸಿಬ್ಬಂದಿಗಳನ್ನು ಹಾಗೂ ಉಗ್ರಾಣ ಸಹಾಯಕರು/24X7 ಎಚ್‌ಟಿ/ಎಲ್‌ಟಿ ಮಾರ್ಗಗಳ ನಿರ್ವಹಣೆಗೆ ಸಿಬ್ಬಂದಿಗಳನ್ನು/ಲಾರಿ ಚಾಲಕರು/ಭದ್ರತಾ ಸಿಬ್ಬಂದಿಯ ಸೇವೆಗಳನ್ನು ಹೊರಗಿನ ಏಜೆನ್ಸಿಗಳ ಮೂಲಕ **1 ವರ್ಷದ** ಅವಧಿಗೆ ಪಡೆಯಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಸದರಿ ಟೆಂಡರ್‌ಗಳ ಪೂರ್ಣ ವಿವರವನ್ನು ದಿನಾಂಕ: 07.05.2026 ರಂದು ಅಥವಾ ನಂತರ **kppp.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು. ಟೆಂಡರ್‌ಗಳನ್ನು **ದಿನಾಂಕ: 06–06–2026 ರ ಸಾಯಂಕಾಲ 04:00 ಗಂಟೆಯವರೆಗೆ** ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕೆಳ ಸಹಿದಾರರ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಅಧೀಕ್ಷಕ ಅಭಿಯಂತರರು (ವಿ),
ಕಾ ಮತ್ತು ಪಾ ವೃತ್ತ, ಹುವಿಸಕಂನಿ., ಬೆಳಗಾವಿ

ವಾ.ಸಾ.ಇ./ಧಾರವಾಡ/131/
2026–27/ದೇಶಪಾಂಡೆಪಬ್ಲಿಸಿಟಿ

## ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

**ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ**

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್–05/2026/1338 ದಿ:04.05.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: **13.05.2026ರ ಸಂಜೆ 4.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. **(Download)** ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: **0824–2440720**)

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/DK/KSMCA/179/
26-27 dt. 06.05.2026

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂಮು.ಪ್ರವ್ಯ(ತಾ)/ಉ.ಪ್ರವ್ಯ(ಎಪಿಸಿಸಿ&ಪ್ರೊ)/ಕಾನಿಇಂ–4/ಸ.ಕಾ.ನಿ.ಇಂ–5/2026–27/594–623 ದಿನಾಂಕ:06.05.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

**ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ**

**ಕವಿಪ್ರನಿನಿ/2026–27/ಎಸ್‌ಎಸ್/ವರ್ಕ್_ಇಂಡೆಂಟ್3608**

**ಕೆಳಕಂಡ ಕಾಮಗಾರಿಗಳು ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ:**

**ಕಾಮಗಾರಿ–ಎ:1.** ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ 400/220ಕೆವಿ ಗುತ್ತೂರು ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ವಿದ್ಯುತ್ ಶಕ್ತಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

**2.**0.12ಕಿಮೀ. ಉದ್ದದ 220ಕೆವಿ ಒಂಟಿ ವಿದ್ಯುತ್ ಮಾರ್ಗವನ್ನು ಜೋಡಿ ಗೋಪುರಗಳ ಮೇಲೆ ಡ್ರೇಕ್ ವಾಹಕವನ್ನು ಉಪಯೋಗಿಸಿ ನಿರ್ಮಾಣ ಮಾಡುವ ಕಾಮಗಾರಿ.

**3.**ಅಸ್ತಿತ್ವದಲ್ಲಿರುವ 400/220ಕೆವಿ ಗುತ್ತೂರು ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ನವೀಕರಣ ಮತ್ತು ಆಧುನೀಕರಣ ಮಾಡುವ ಕಾಮಗಾರಿ.

**ಕಾಮಗಾರಿ–ಬಿ:** ಗದಗ ಜಿಲ್ಲೆ, ಮುಂಡರಗಿ ತಾಲ್ಲೂಕಿನ 400/220/33ಕೆವಿ ಡೋಣಿ ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT) ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

**ಕಾಮಗಾರಿ–ಸಿ:** ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕಿನ 400/220ಕೆವಿ GIS/AIS ಹಿರೇಮಲ್ಲನಹೊಳೆ (Jagaluru) ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT) ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

**ಕಾಮಗಾರಿ–ಡಿ:** ಕಲಬುರಗಿ ಜಿಲ್ಲೆ ಮತ್ತು ತಾಲ್ಲೂಕಿನ **400/220ಕೆವಿ ಫಿರೋಜಾಬಾದ್** ಸ್ವೀಕರಣಾ ಕೇಂದ್ರದಲ್ಲಿ **1x500ಎಂವಿಎ,** 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT)ಶಕ್ತಿ ಪರಿವರ್ತಕವನ್ನು ಮತ್ತು **1X125 ಎಂವಿಎಆರ್ ಹೆಚ್ಚುವರಿ ಬಸ್ ರಿಯಾಕ್ಟರನ್ನು** ಅಳವಡಿಸುವ ಕಾಮಗಾರಿ.

**ಕಾಮಗಾರಿ–ಇ:** ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ 400/220ಕೆವಿ ದೊಮ್ಮಸಂದ್ರ ಸ್ವೀಕರಣಾ ಕೇಂದ್ರದಲ್ಲಿ 1X125 ಎಂವಿಎಆರ್ ಹೆಚ್ಚುವರಿ ಬಸ್ ರಿಯಾಕ್ಟರನ್ನು ಅಳವಡಿಸುವ ಕಾಮಗಾರಿ.

ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಅಳವಡಿಸುವ (ಕಳಚುವುದು ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 07.05.2026** ರಂದು ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 22.05.2026. @ 15.00 ಗಂಟೆ.**

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

**ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),**
**ನಿಗಮ ಕಛೇರಿ, 11ನೇ ಮಹಡಿ, ಕವಿಪ್ರನಿನಿ,**
**ಇಂಧನ ಭವನ, ಎ.ಆರ್.ವೃತ್ತ, ಬೆಂಗಳೂರು–560 009.**

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

**ಟೆಂಡರ್ ಆಹ್ವಾನ ಪ್ರಕಟಣೆ (ಎನ್ಐಟಿ) (ಕೆಪಿಪಿ ಪೋರ್ಟಲ್ ಮುಖಾಂತರ)**

**ಸಂಖ್ಯೆ: ಬೆವಿಕಂ/ಮುಪ್ರವ್ಯ(ಯೋ)/ಉಪ್ರವ್ಯ–1/ಸಪ್ರವ್ಯ–1/ಬಿಸಿ–14/26–27/ಸಿವೈಎಸ್–34**

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಸಕ್ರಮಗೊಳಿಸಿದ ಐಪಿ ಸೆಟ್‌ಗಳಿಗೆ 11 ಕೆವಿ ಮಾರ್ಗವನ್ನು ಹಾಗೂ 25 ಕೆವಿಎ ಪರಿವರ್ತಕವನ್ನು ಸ್ಥಾಪಿಸಿ ಮತ್ತು ಎಲ್‌ಟಿ ಮಾರ್ಗಗಳನ್ನು ವಿಸ್ತರಿಸಿ ವಿದ್ಯುತ್ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳಿಗೆ ಶೇಕಡವಾರು ಆಧಾರದಲ್ಲಿ ಭಾಗಶಃ ಗುತ್ತಿಗೆ ಆಧಾರದಲ್ಲಿ (25 ಕೆವಿಎ ಪರಿವರ್ತಕವನ್ನು ಬೆವಿಕಂನಿಂದ ಸರಬರಾಜು ಮಾಡಲಾಗುವುದು) ಈ ಕೆಳಕಂಡ ವಿಚಾರಣಾ ಸಂಖ್ಯೆಗಳಿಗೆ ಟೆಂಡರ್‌ಗಳನ್ನು ಮರು ಆಹ್ವಾನಿಸಲಾಗಿದೆ.**

| ಕ್ರ.ಸಂ. | ಟೆಂಡರ್ ವಿಚಾರಣೆ ಸಂಖ್ಯೆ | ಉಪ ವಿಭಾಗದ ಹೆಸರು |
|---|---|---|
| 1 | BESCOM/2025-26/EL/WORK_INDENT878/CALL-2 | ಕನಕಪುರ ನಗರ |
| 2 | BESCOM/2025-26/EL/WORK_INDENT880/CALL-2 | ಯಡಿಯೂರು |
| 3 | BESCOM/2025-26/EL/WORK_INDENT881/CALL-2 | ಸಾತನೂರು |
| 4 | BESCOM/2025-26/EL/WORK_INDENT882/CALL-2 | ಬಂಗಾರಪೇಟೆ |
| 5 | BESCOM/2025-26/EL/WORK_INDENT889/CALL-2 | ಚನ್ನಪಟ್ಟಣ ಗ್ರಾಮೀಣ |
| 6 | BESCOM/2025-26/EL/WORK_INDENT890/CALL-2 | ತುಮಕೂರು ಗ್ರಾಮೀಣ–2 |
| 7 | BESCOM/2025-26/EL/WORK_INDENT892/CALL-2 | ಗೌರಿಬಿದನೂರು |
| 8 | BESCOM/2025-26/EL/WORK_INDENT900/CALL-2 | ಹರಿಹರ |
| 9 | BESCOM/2025-26/EL/WORK_INDENT908/CALL-2 | ತೆಲಗಿ |
| 10 | BESCOM/2025-26/EL/WORK_INDENT909/CALL-2 | ತಿಪಟೂರು |
| 11 | BESCOM/2025-26/EL/WORK_INDENT911/CALL-2 | ಹೊಸದುರ್ಗ |
| 12 | BESCOM/2025-26/EL/WORK_INDENT913/CALL-2 | ಚಿತ್ರದುರ್ಗ ಗ್ರಾಮೀಣ |

**ಬಿಡ್ ದಸ್ತಾವೇಜುಗಳ ಲಭ್ಯತೆ : 13.05.2026ರ ನಂತರದಲ್ಲಿ. ಬಿಡ್‌ಗೆ ಸಂಬಂಧಿಸಿದ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18.05.2026, 17:00 ಗಂಟೆಯ ಒಳಗೆ. ಬಿಡ್ ಪೂರ್ವಭಾವಿ ಸಭೆಯ ದಿನಾಂಕ : 19.05.2026, 11:00 ಗಂಟೆಗೆ. ಸ್ಥಳ : ಸಭಾ ಕೊಠಡಿ, 3ನೇ ಮಹಡಿ, ಬೆಳಕು ಭವನ, ನಿಗಮ ಕಛೇರಿ, ಕೆ ಆರ್ ವೃತ್ತ, ಬೆವಿಕಂ, ಬೆಂಗಳೂರು–560001. ಬಿಡ್ದುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 25.05.2026, 15:00 ಗಂಟೆ. ತಾಂತ್ರಿಕ ಬಿಡ್ದುಗಳನ್ನು ತೆರೆಯುವ ದಿನಾಂಕ : 26.05.2026, 15:30 ಗಂಟೆಗೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಬಿಡ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಹುದು ಹಾಗೂ ಅಗತ್ಯ ನೆರವನ್ನು ಪಡೆದುಕೊಳ್ಳಬಹುದು. ಇ–ಪ್ರೊಕ್ಯೂರ್‌ಮೆಂಟ್ ಸಹಾಯ ಸಂಪರ್ಕ ಸಂಖ್ಯೆ: +91–8046010000, +91–8068948777 ಮತ್ತು ಇ ಮೇಲ್: support@eprochelpdesk.com.**

ಆಸಕ್ತ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಬಿಡ್‌ದಾರರು ಕಛೇರಿ ಕೆಲಸದ ಸಮಯದಲ್ಲಿ ಸಹಾಯಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/–ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ) ಯೋಜನೆಗಳು, ಬೆವಿಕಂ.
ಇ ಮೇಲ್: cgmproject.bescom@gmail.com

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

## ಚಿನ್ನದ ಹರಾಜಿನ ನೋಟಿಸ್

ಬಜಾಜ್ ಫೈನಾನ್ಸ್ ಲಿಮಿಟೆಡ್ ("BFL");
ರಿಜಿಸ್ಟರ್ಡ್ ಆಫೀಸ್: ಮುಂಬೈ – ಪುಣೆ ರೋಡ್,
ಅಕುರ್ಡಿ, ಪುಣೆ 411035

BAJAJ FINANCE

ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ ಎಂದರೆ ಈ ಕೆಳಗೆ ಉಲ್ಲೇಖಿಸಿರುವ ಸಾಲಗಾರರಿಗೆ ಇದುವರೆಗೂ ಹಲವು ಸೂಚನೆಗಳನ್ನು ನೀಡಿದರೂ ಸಹ, ಅವರು ಸಾಲವನ್ನು ಮರುಪಾವತಿಸಲು ಅಥವಾ ಅಗತ್ಯ ಮಾರ್ಜಿನ್ ಒದಗಿಸಲು ವಿಫಲರಾಗಿರುವ ಕಾರಣದಿಂದ, ಸಾಲದ ಭದ್ರತೆಗಾಗಿ ಸಾಲಗಾರ (ರು) ನೀಡಿರುವ ಚಿನ್ನವನ್ನು "ಹೇಗಿದೆಯೋ ಹಾಗೆಯೇ" (As is where is basis) ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಂತೆ ಹರಾಜು ಮಾಡಲಾಗುತ್ತಿದೆ.

1. ಸಾರ್ವಜನಿಕ ನೋಟಿಸ್ ನ ಪೂರ್ಣ ವಿವರಗಳನ್ನು ಪಡೆಯಲು QR ಕೋಡ್ ಸ್ಕ್ಯಾನ್ ಮಾಡಿ. (ಚಿನ್ನದ ವಿವರಗಳು & ಒಟ್ಟು ತೂಕ), 2. ಸಂಪೂರ್ಣ ಬಿಡ್ಡರ್ ನಿಯಮಗಳು http://172.30.1.235:3000/?WOUB2QG9WU ನಲ್ಲಿ ಲಭ್ಯವಿದೆ 3. ಬಿಡ್ಡರ್‌ಗಳು ಹರಾಜಿನ ಸಮಯದಲ್ಲಿ ಅಥವಾ ಮೊದಲು ಆನ್‌ಲೈನ್ ವರ್ಗಾವಣೆಯ ಮೂಲಕ ₹25,000/– ಗಳ ಅರ್ನೆಸ್ಟ್ ಮನೀ ಠೇವಣಿ (EMD) ಇಡಬೇಕು; 4. ಗುರುತಿನ ಚೀಟಿ ಮತ್ತು ವಿಳಾಸದ ಮಾನ್ಯ ಪುರಾವೆಯೊಂದಿಗೆ, ಬೆಳಿಗ್ಗೆ 10 ಗಂಟೆಗೆ ಹರಾಜು ಸ್ಥಳದಲ್ಲಿ ವೈಯಕ್ತಿಕ ಹಾಜರಾತಿ, ಕಡ್ಡಾಯವಾಗಿದೆ.

ಹರಾಜು ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು ಹರಾಜು ಕೇಂದ್ರದಲ್ಲಿ ಡಿಸ್‌ಪ್ಲೇ ಮಾಡಲಾಗುತ್ತದೆ. ಬಿಡ್ ಸಲ್ಲಿಸುವಾಗ ಮೇಲಿನ ನಿಯಮಗಳು ಸ್ವೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಯಾವುದೇ ವಿವರಗಳಿಗೆ ಸಂಪರ್ಕಿಸಿ: wecare@bajajfinserv.in

(10-06-26) ಅಜ್ಜಂಪುರ – ಹೊಸದುರ್ಗ ರೋಡ್; PKC4SGL15253971, 17470728, 17769781. ಬಾಗಲ್‌ಕೋಟ್ – ವಿದ್ಯಗಿರಿ; PGC8SGL17661591, 17702375, 17755134, 17794641, 18048192, 18056841, 18049642, 18054405, 18048858, 18046674, 18053307, 18051417, 18050827, 18032826, 18067151, 18297027. ಬೆಂಗಳೂರು – ಎಚ್‌ಎಸ್‌ಆರ್ ಲೇಔಟ್; PEX2SGL12315289. ಬಸವಕಲ್ಯಾಣ್ – ಹರಲಯ್ಯ ಸರ್ಕಲ್; PER8SGL17428228, 17550798, 17626273, 17758690, 17793725. ಬೆಳಗಾಮ್ – ರಾಮ್‌ಲಿಂಗ್ ಖಿಂಡ್ ಗಲ್ಲಿ; PBY3SGL17467496, 17533859. ಬಳ್ಳಾರಿ – ಆರ್‌ಟಿಎಚ್; PBY4SGL17494060, 17760535, 17845298, 17843873, 17846355, 17845573. ಬೀದರ್ – ಅಂಬೇಡ್ಕರ್ ಸರ್ಕಲ್; P87QSGL17838516, 18043577, 18083824. ಬಿಜಾಪುರ್ – ಬಾಗಲ್‌ಕೋಟ್ ರೋಡ್; PLE1SGL17727127. (11-06-26) ದೊಡ್ಡಬಳ್ಳಾಪುರ – ಡಿ ಕ್ರಾಸ್ ರೋಡ್; PGH5SGL11987862, 12200643, 17726784, 17954035. ಗೌರಿಬಿದನೂರ್ – ಹಿಂದೂಪುರ ರೋಡ್; PMK3SGL17561942. ಗೋಕಾಕ್ – ಹೊಸ್‌ಪೇಟ್ ಗಲ್ಲಿ; PBZ2SGL17637050, 18037715, 18042158, 18093574, 18216130. ಗುಬ್ಬಿ – ಬಿಎಚ್ ರೋಡ್; POI9SGL17652889. ಗುಲ್‌ಬರ್ಗ – ಜೇವರ್ಗಿ ಬಸ್ ಸ್ಟಾಂಡ್; PMS6SGL17831436, 18022432. ಗುಲ್‌ಬರ್ಗ – ಸೂಪರ್ ಮಾರ್ಕೇಟ್; P12ISGL17960011, 18054193. ಗುಲ್‌ಬರ್ಗ – ಎಸ್‌ವಿಪಿ ಚೌಕ್; PGH6SGL17424262, 17418664, 17446372, 17628774, 17774200. ಹಡಗಲಿ – ಹರಪನಹಳ್ಳಿ ರೋಡ್; PLM6SGL17499124, 17635298, 17688577, 17990714. ಹಗರಿಬೊಮ್ಮನಹಳ್ಳಿ – ಹೊಸ್‌ಪೇಟ್ ರೋಡ್; PKD5SGL17573581, 17697551, 17968260. (12-06-26) ಬಿಜಾಪುರ್ – ಸರಾಫ್ ಬಜಾರ್; PBY6SGL15146421, 15146900, 16254186, 16392769, 17477246, 17548409, 17618481, 17720298, 17723396, 17766981, 17791405, 17792625, 17835045, 17835647, 17873005, 17876974, 17949125, 17963084, 18025295, 18020715, 18075660, 18149676, 18238035. ಬ್ಯಾಡಗಿ – ಬಸ್ ಸ್ಟಾಂಡ್ ಸರ್ಕಲ್; PKO3SGL16642149, 17505188, 17957413. ಚನ್ನಗಿರಿ – ಪಿಡಬ್ಲ್ಯುಡಿ ಶಿಮೋಗಾ ಮೈನ್ ರೋಡ್; PKK2SGL17452772, 17842973. ಚನ್ನರಾಯಪಟ್ಣ – ಕಾಳೇನಹಳ್ಳಿ ರೋಡ್; PLM9SGL17796809, 17948156. ಚಿಕ್ಕಬಳ್ಳಾಪುರ್ – ಬೀರಪ್ಪ ಸ್ಟ್ರೀಟ್; PEO5SGL12174472, 12718234, 12819584, 13162800, 13163281, 13257175, 13903851, 17863355, 18020601. ಚಿತ್ರದುರ್ಗ – ಮೇಧೆಹಳ್ಳಿ ರೋಡ್; PBY8SGL17896568. ದಾವಣಗೆರೆ – ಪಿ ಬಿ ರೋಡ್; PNS2SGL17531826, 17728913. ಧಾರವಾಡ್ – ಎನ್‌ಟಿಟಿಎಫ್; PBY9SGL15119713, 17394116, 17878827, 18234528. ಧಾರವಾಡ್ – ಸವದತ್ತಿ ರೋಡ್; PMJ6SGL17575562, 17960979. (15-06-26) ಹಂಗಲ್–ಟಿಜಿ ರೋಡ್; PMJ8SGL16321482, 16475630, 17478733, 17481715, 17658074, 17722510, 17923410, 18232492. ಹರ್ಪನಹಳ್ಳಿ – ಬಿಜಿಎಲ್; PX14SGL17473407, 17754593. ಹಾಸನ್ – ಎನ್‌ಆರ್ ಸರ್ಕಲ್; PEO6SGL15174008, 16590213, 17692042, 17692743, 18092517, 18113689, 18144585. ಹಾವೇರಿ – ಬಸ್ ಸ್ಟಾಂಡ್; PBZ3SGL16370223, 17400104, 17474348, 17636547, 17797549, 17827686, 17861430, 17963413, 17946884. ಹಿರಿಯೂರ್ – ಮೈನ್ ರೋಡ್; PMK6SGL17694613, 17691511. ಹೊಳಕೆರೆ – ಶಿಮೋಗಾ ರೋಡ್; PLP7SGL17757020, 18121299. ಹೊಸದುರ್ಗ – ಹುಲಿಯಾರ್ ರೋಡ್; PEX1SGL17571054, 17631736, 17953055, 18073553, 18236484, 18237365. ಹೊಸ್‌ಕೋಟೆ – ಕೆಈಬಿ ಸರ್ಕಲ್; PLG1SGL17791105, 18119652. (16-06-26) ಹೊಸ್‌ಪೇಟ್ – ಶಾನ್‌ಬಾಗ್ ಸರ್ಕಲ್; PBZ4SGL17397483, 17660885, 17766945. ಹುಬ್ಬಳ್ಳಿ – ವಿಕ್ಟೋರಿಯಾ ರೋಡ್; PBZ5SGL12126087, 17902737. ಹುಲಿಯಾರ್ – ಬಿ ಎಚ್ ರೋಡ್; PLM1SGL17456590, 17670591. ಕಡೂರ್ – ಚೆಕ್ ಪೋಸ್ಟ್ ಸರ್ಕಲ್; PIZ6SGL17571660. ಕನ್ನೂರ್ ಕೆಎ; PET2PRN17831604, 18208746. ಕಾರ್ಕಳ – ಮಾರ್ಕೇಟ್ ರೋಡ್; PNV5SGL17700685, 18006822. ಕಾರ್‌ವಾರ್ – ಬಿಜಿಎಲ್; PNR8SGL17620177, 17636265. ಕೆಂಗೇರಿ – ಎಂಭತ್ತು ಅಡಿ ರಸ್ತೆ; PBZ6SGL12001886, 17391526, 17804008, 17942959, 18124680. (17-06-26) ಕೋಲಾರ್ – ಎಂ ಬಿ ರೋಡ್; PGH7SGL15193730, 17719689. ಕೊಳ್ಳೆಗಲ್ – ವಾಟರ್ ವರ್ಕ್ಸ್ ರೋಡ್; PMS3SGL17477789. ಕೊಟ್ಟೂರ್ – ಮೈನ್ ರೋಡ್; PLN4SGL13854976, 16188520, 16520976, 17619694, 17840472. ಕೂಡ್ಲಿಗಿ – ಹೊಸಳ್ಳಿ ರೋಡ್; PLD9SGL16443318, 17408900, 17451449, 17533544, 17529869, 17836505, 17940938, 18026155, 18138794, 18318186. ಕುಕ್ನೂರ್; PA31PRN17824521. ಲಿಂಗಸುಗೂರ್ – ರಾಯ್‌ಚೂರ್ ರೋಡ್; PBZ7SGL13355208. ಮದ್ದೂರ್ – ಕೊಲ್ಲಿ ಸರ್ಕಲ್; PCZ8SGL18206468. ಮಧುಗಿರಿ – ಟಿವಿವಿ ಸರ್ಕಲ್; PLM7SGL17688605. (18-06-26) ಮಾನ್ವಿ – ಸಿಂಧನೂರ್ ರೋಡ್; PPA6SGL17546126, 17800939, 18151590. ಮೂಡಲಗಿ; P28APRN17654826. ಮೈಸೂರ್ – ನಾರಾಯಣ ಶಾಸ್ತ್ರಿ ರೋಡ್; PGH8SGL17452599. ಮೈಸೂರ್ – ಸರಸ್ವತಿಪುರಂ; PBZ8SGL17697269. ಮೈಸೂರ್ – ವಿವೇಕಾನಂದ ನಗರ್; PED7SGL17955205, 18145454. ನಂಜನ್‌ಗೂಡ್ – ಎಂಜಿಎಸ್ ರೋಡ್; PBZ9SGL17533964, 17533215, 17806735, 17903975, 17905915, 18020776, 18153508. ರಾಯ್‌ಚೂರ್ – ಗಂಜ್ ಮೈನ್ ರೋಡ್; PEP2SGL17457855, 18220545. ರಾಮನಗರ – ರೈಲ್ವೇ ಸ್ಟೇಷನ್ ರೋಡ್; PEH1SGL11686332, 17863276, 18155567, 18222153, 18305644. (19-06-26) ರಾಣೇಬೆನ್ನೂರ್ – ಪಿಬಿ ರೋಡ್; PGI1SGL12312434, 15092106, 16393735, 17403560, 17499069, 17547400, 17580935, 17767138, 17770726, 17998459, 17991045, 18072727, 18121837, 18113746. ಶಾಹಪೂರ್ – ಬಸ್ ಸ್ಟಾಂಡ್ ರೋಡ್; PIZ9SGL17459991, 17723204, 17986954. ಶಿಗ್ಗಾಂವ್ – ಬಸ್ ಸ್ಟಾಂಡ್ ರೋಡ್; PPV1SGL18030606. ಸಿಂಡಗಿ – ವಿಜಯಪುರ್ ರೋಡ್; PET1PRN12791265, 17870833. ತಾಂಬಾ; PET4PRN17546485, 17745098, 17896539, 17987808, 18081102, 18228943. ತಾವರಗೇರಾ; PK46PRN18085497. ತಿಪ್ಟೂರ್ – ಬಿ ಎಚ್ ರೋಡ್; PGO7SGL17565450. ತುಮ್ಕೂರ್ – ಬಿ ಎಚ್ ರೋಡ್; PEL1SGL17546849, 18074715.

**ಬಜಾಜ್ ಫೈನಾನ್ಸ್ ಲಿಮಿಟೆಡ್**